WPP No. SK/MNG/WPP/69 D.O.P - 15th of every month from Udupi HPO

ಬೆಲೆ ರೂ.2.50

ದಶಮಾನೋತ್ಸವ ಸಂಭ್ರಮ

# ಶ್ರೀ ಶಾರದಾ

ಮಾಸಪತ್ರಿಕೆ – 15 ಜೂನ್ 2010

॥ ಧಿಯೋ ಯೋನಃ ಪ್ರಚೋದಯಾತ್ ॥

**ಹೆಬ್ಬಾರ್ ಎಂಟರ್‌ಪ್ರೈಸಸ್**

ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101.

ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್ ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.


ಫೋನ್ : 2531493 (O), 2530851 (R), ಮೊಬೈಲ್ : 94484 37893

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-10 ಸಂಚಿಕೆ-6 ಪುಟಗಳು-8 Registered Under No.J/UDP/1260/2009-2011 Dated from 01-12-2008 to 30-11-2011.

ಶ್ರೀ ಕೃಷ್ಣಾಯನ
- ಕೆ. ಆತ್ಮಾರಾಮ ಶಾಸ್ತ್ರಿ, ಬೆಂಗಳೂರು
ಪುಟ-2

''ಹರಿಕಥೆ ಅಪೇಕ್ಷಿತವೇ?
ಅನಪೇಕ್ಷಿತವೇ?-೩
- ಮ.ನಾ.ಹೆಬ್ಬಾರ, ಎಂ.ಎ., ಬಿ.ಎಡ್.
ಪುಟ-4



ಸಸ್ಯಾಹಾರ Vs ಮಾಂಸಾಹಾರ
- ವೈ. ಶಂಕರನಾರಾಯಣ ರಾವ್, ಪಡುಬಿದ್ರಿ
ಪುಟ-5



ವೈದ್ಯೋ ನಾರಾಯಣೋ ಹರಿ:
ಹಳೆಯಂಗಡಿ ಸುಬ್ರಾಯ (ಹರಿ)
ಭಟ್ಟರ ವ್ಯಕ್ತಿ ಪರಿಚಯ
- ಯಚ್. ಶಿವಚಂದ್ರ ಭಟ್
ಪುಟ-6

# ಸನಾತನ ಧರ್ಮ ಗುರುವಿಗೆ ಸರ್ವೋನ್ನತ ಸ್ಥಾನವನ್ನು ನೀಡಿದೆ

## – ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳು



ಶೋಭಾ ಡಿಜಿಟಲ್ ಸ್ಟುಡಿಯೋ, ಬೆಳುವಾಯಿ.



ಸನಾತನ ಧರ್ಮ ಗುರುವಿಗೆ ಅತ್ಯಂತ ಹಿರಿಯ ಸ್ಥಾನ ನೀಡಿದೆ. ಯಾಕೆಂದರೆ ಶಿಷ್ಯನ ಅಜ್ಞಾನಾಂಧಕಾರವನ್ನು ಕಳೆದು ಜ್ಞಾನದೀಪವನ್ನು ದಯಪಾಲಿಸುವವನೇ ಸದ್ಗುರು. ಜೀವಿಗೆ ಜ್ಞಾನವೇ ಸರ್ವಶ್ರೇಷ್ಠವಾದುದು. ಬದುಕಿನ ಸಾರ್ಥಕತೆಗೆ ಅತ್ಯಾವಶ್ಯಕವಾದುದು ಜ್ಞಾನ. ಅದನ್ನು ನೀಡುವವನೇ ಗುರು. ಆದುದರಿಂದಲೇ ಗುರುವಿಗೆ ಉನ್ನತ ಸ್ಥಾನ ಎಂದು ದಕ್ಷಿಣಾಮ್ನಾಯ ಶೃಂಗೇರಿ ಶಾರದಾ ಪೀಠದ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳು ತಿಳಿಸಿದರು. ಅವರು ಜೂನ್ 7ರಂದು ಸೋಮವಾರ ಬೆಳಿಗ್ಗೆ ಶ್ರೀಶಾರದಾ ಮಂಟಪದಲ್ಲಿ ಶಿಷ್ಯವೃಂದವನ್ನು ಆಶೀರ್ವಚಿಸಿ ಮಾತನಾಡುತ್ತಿದ್ದರು.

ಶಂಕರ ಭಗವತ್ಪಾದರು ಸನಾತನ ಧರ್ಮ ನಶಿಸಿ ಹೋಗುತ್ತಿದ್ದಾಗ ಅವತರಿಸಿ, ಧರ್ಮವನ್ನು ಉದ್ಧರಿಸಿ, ಲೋಕೋದ್ಧಾರ ಮಾಡಿದರು. ಶಂಕರ ಭಗವತ್ಪಾದಾಚಾರ್ಯರು ಅವತರಿಸದಿರುತ್ತಿದ್ದರೆ ವೇದಾಂತದ ಗಹನವಾದ ವಿಚಾರಗಳ ಯಥಾರ್ಥತೆ ನಮಗೆ ತಿಳಿಯುತ್ತಿರಲಿಲ್ಲ. ಭಗವಾನ್ ಬಾದರಾಯಣರ ಹೃದ್ಗತ ವೇದಗಳ ತತ್ವಗಳನ್ನು ಅರಿಯಲು ಸಾಧ್ಯವಾಗುತ್ತಿರಲಿಲ್ಲ. ಭಗವದ್ಗೀತೆಯನ್ನು ಬೋಧಿಸಿದ ಗೀತಾಚಾರ್ಯ ಶ್ರೀಕೃಷ್ಣ ಪರಮಾತ್ಮನ ಆಂತರ್ಯ ವೇದ್ಯವಾಗುತ್ತಿರಲಿಲ್ಲ. ಶಂಕರ ಭಗವತ್ಪಾದರು ಉಪನಿಷತ್ತು, ಬ್ರಹ್ಮಸೂತ್ರಗಳು ಮತ್ತು ಭಗವದ್ಗೀತೆಗೆ ಭಾಷ್ಯವನ್ನು ಬರೆದು ಅವುಗಳ ಯಥಾರ್ಥವಾದ ವೇದಾಂತ ತತ್ವವನ್ನು ನಮಗೆ ತಿಳಿಸಿಕೊಟ್ಟರು. ಅವರನ್ನು ಈ ಜನಾಂಗವೇ ನಿರಂತರ ಸ್ಮರಿಸಿಕೊಳ್ಳಬೇಕು. ಇಲ್ಲದಿದ್ದರೆ ನಾವು ಅವಿವೇಕಿಗಳಾಗುತ್ತೇವೆ. ಉಪಕಾರ ಸ್ಮರಣೆ ಮನುಷ್ಯನ ಅತ್ಯಂತ ದೊಡ್ಡ ಗುಣ. ಉಪಕಾರ ಮಾಡಿದವನಿಗೆ ಕೃತಜ್ಞತೆ ಸಲ್ಲಿಸುತ್ತಾ ಭಗವಂತನ ಧ್ಯಾನ ಮಾಡುತ್ತಾ ಜನ್ಮವನ್ನು ಸಾರ್ಥಕ ಪಡಿಸಿಕೊಳ್ಳಬೇಕು ಎಂದರು.

ಭಗವಂತ ಒಬ್ಬನೇ, ಅವನು ಸರ್ವಾಂತರ್ಯಾಮಿ, ಸರ್ವಶಕ್ತ. ಅವನು ಚಕ್ರಧಾರಿಯಾದ ಕೃಷ್ಣನಾಗಬಲ್ಲ, ತ್ರಿಶೂಲಧಾರಿಯಾದ ಈಶ್ವರನಾಗಬಲ್ಲ. ದುರ್ಗೆಯಾಗಿ, ಲಕ್ಷ್ಮೀಯಾಗಿ, ಶಾರದೆಯಾಗಿ ಅವತರಿಸಬಲ್ಲ. ಭಗವಂತನ ಈ ರೂಪಗಳಲ್ಲಿ ಭೇದವನ್ನು ಕಲ್ಪಿಸುವುದು ಅತ್ಯಂತ ಪಾಪದ ಕೆಲಸ ಎಂದ ಜಗದ್ಗುರುಗಳು ದುರ್ಲಭವಾದ ಮನುಷ್ಯ ಜನ್ಮವನ್ನು ಧರ್ಮದ ಆಚರಣೆ, ಭಗವಂತನ ಧ್ಯಾನ ಮತ್ತು ಉಪಕಾರ ಸ್ಮರಣೆಗಳನ್ನು ಮಾಡಿ ಸಾರ್ಥಕ ಪಡಿಸಿಕೊಳ್ಳೋಣ. ಅಧರ್ಮವನ್ನು ಆಚರಿಸಿ, ಮೂರ್ಖರಾಗುವುದು ಬೇಡ, ವಿವೇಕಿಗಳಾಗೋಣ ಎಂದರು. ಶ್ರೀಶಾರದಾ ಪೀಠದ ಎಲ್ಲಾ ಶಿಷ್ಯವರ್ಗ ತನಗೆ ಅತ್ಯಂತ ಪ್ರಿಯವಾದುದು ಎಂದ ಅವರು ಎಲ್ಲೆಡೆ ಇರುವ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಶಿಷ್ಯವರ್ಗದ ಮೇಲೆ ಅಪಾರ ಅಭಿಮಾನವಿದೆ. ಅವಕಾಶ

(3ನೇ ಪುಟಕ್ಕೆ...)

### ಶ್ರೀಶಾರದಾ ಮಂಟಪದಲ್ಲಿ ಸಾಮೂಹಿಕ ಉಪನಯನ ಹಾಗೂ ಶಂಕರ ಜಯಂತಿ ಆಚರಣೆ

# ಹಿಂದೂಧರ್ಮವನ್ನು ಒಗ್ಗೂಡಿಸಿದ ಆದಿಶಂಕರಾಚಾರ್ಯರು

**– ಸಾಂತೂರು ಸದಾಶಿವರಾವ್**



ಅದ್ವೈತ ತತ್ವದ ಮೂಲಕ ಪ್ರಸಿದ್ಧರಾದ ಶ್ರೀ ಶಂಕರಾಚಾರ್ಯರು ಹಿಂದೂ ಧರ್ಮವು ಹರಿಹಂಚಿಕೊಂಡು, ಕೆಲವರು ಬೇರೆ ಬೇರೆ ಧರ್ಮಗಳ ಅನುಯಾಯಿಗಳಾಗತೊಡಗಿದಾಗ (ಉದಾ:ಜೈನ, ಬೌದ್ಧ ಮತ) ಎಲ್ಲರನ್ನೂ ಒಗ್ಗೂಡಿಸಿ ಎಲ್ಲಾ ಜಾತಿ ಮತದವರನ್ನು ಹಿಂದೂಧರ್ಮದ ಅನುಯಾಯಿಗಳನ್ನಾಗಿ ಮಾಡಿದರು. ಅಲ್ಲದೇ ಸಣ್ಣ ಪ್ರಾಯದಲ್ಲೇ ಬ್ರಹ್ಮಚರ್ಯದ ಬಗ್ಗೆ ತಿಳಿದುಕೊಂಡ ಶಂಕರರು ಸನ್ಯಾಸಿಗಳಾಗಿದ್ದು ದೇಶ ಸಂಚಾರವನ್ನು ಮಾಡಿ ಅದ್ವೈತ ತತ್ವವನ್ನು ದೇಶದ ಮೂಲೆ ಮೂಲೆಗೂ ಪಸರಿಸಿ, ಚತುರಾಮ್ನಾಯ

(3ನೇ ಪುಟಕ್ಕೆ...)

### ಶ್ರೀಶಾರದಾ ಕ್ರೆಡಿಟ್ ಕೋ–ಅಪರೇಟಿವ್ ಸೊಸೈಟಿ

# ವಿಶೇಷ ಸರ್ವಸದಸ್ಯರ ಸಭೆ–ಶೇ.10 ಡಿವಿಡೆಂಡ್ ನೀಡಲು ನಿರ್ಧಾರ

ಶ್ರೀಶಾರದಾ ಕ್ರೆಡಿಟ್ ಕೋ–ಅಪರೇಟಿವ್ ಸೊಸೈಟಿಯ ಸರ್ವಸದಸ್ಯರ ವಿಶೇಷ ಸಭೆಯು ತಾ.29–5–2010ನೇ ಶನಿವಾರ ಅಪರಾಹ್ನ 4 ಗಂಟೆಗೆ ಸೊಸೈಟಿಯ ಕಛೇರಿಯಿರುವ ಭೂವರಾಹ ಸಂಕೀರ್ಣ ಸಭಾಭವನದಲ್ಲಿ ನಡೆಯಿತು. ಈ ಸಭೆಯಲ್ಲಿ 2008–09ನೇ ಸಾಲಿನ ಲೆಕ್ಕ ಪರಿಶೋಧಕರ ವರದಿಯ ಅಂಗೀಕಾರ ಹಾಗೂ ನಿವ್ವಳ ಲಾಭದ ವಿಂಗಡಣೆಯನ್ನು ನಿರ್ಧರಿಸಲಾಯಿತು.

ಸೊಸೈಟಿಯ ಅಧ್ಯಕ್ಷರಾದ ಶ್ರೀ ಎಮ್. ಸದಾನಂದ ರಾಯರು ಸದಸ್ಯರನ್ನು ಸ್ವಾಗತಿಸಿ ಸೊಸೈಟಿಯ 2009–10ನೇ ವರ್ಷದ ಬೆಳವಣಿಗೆಯನ್ನು ವಿವರಿಸಿದರು. ನಮ್ಮ ಸೊಸೈಟಿಯು ಕುಕ್ಕಿಕಟ್ಟೆಯಲ್ಲಿ ಶಾಖೆಯನ್ನು ವಿಸ್ತರಿಸಿದ ಬಗೆಯನ್ನು ತಿಳಿಸಿದ ಅವರು ಅದಕ್ಕೆ ಸದಸ್ಯರೂ, ಸಿಬ್ಬಂದಿ ವರ್ಗ ಹಾಗೂ ನಿರ್ದೇಶಕರೆಲ್ಲರ ಸಹಕಾರಕ್ಕೆ ಕೃತಜ್ಞತೆಯನ್ನು ಸಲ್ಲಿಸಿದರು.

ಸಂಘವು 2008–09ನೇ ಸಾಲಿಗೆ ರೂ.4,14,198.50 ಲಾಭ ಗಳಿಸಿದ್ದು, ಕಾರ್ಯದರ್ಶಿ ಶ್ರೀ ಕೆ.ವೇಣುಗೋಪಾಲ ರಾವ್‌ರವರು ಲೆಕ್ಕಪರಿಶೋಧಕರ ವರದಿಯನ್ನು ಸಭೆಯ ಮುಂದಿಟ್ಟರು. ಸಭೆಯು ಅದನ್ನು ಸರ್ವಾನುಮತದಿಂದ ಅಂಗೀಕರಿಸಿತು. ನಿವ್ವಳ ಲಾಭದ ವಿಂಗಡಣೆಯಾಗಿ ಸೊಸೈಟಿಯ ಸದಸ್ಯರಿಗೆ ಶೇ.10 ಡಿವಿಡೆಂಡ್ ನೀಡಲು ನಿರ್ಣಯಿಸಲಾಯಿತು.

ಸಭೆಯ ಆರಂಭದಲ್ಲಿ ಕು। ದೀಕ್ಷಾ ಪ್ರಾರ್ಥಿಸಿ, ಕೊನೆಯಲ್ಲಿ ಶ್ರೀಶಾರದ ಕೋ–ಅಪರೇಟಿವ್ ಸೊಸೈಟಿಯ ಕಾರ್ಯದರ್ಶಿಯಾಗಿ ನಿಯುಕ್ತರಾದ ಶ್ರೀ ಪಟ್ಟಾಭಿರಾಮ ಎನ್.ಎಸ್.ರವರು ವಂದಿಸಿದರು. ಸೊಸೈಟಿಯ ಉಪಾಧ್ಯಕ್ಷ ಶ್ರೀ ಸಿ.ಎಸ್.ರಾವ್ ಹಾಗೂ ನಿರ್ದೇಶಕರೆಲ್ಲರೂ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

**ಸಂಪಾದಕ ಮಂಡಳಿ**

ವೈ. ಮೋಹನ ರಾವ್
ಎಚ್.ಎನ್. ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ
ಟಿ. ಸುರೇಶ ರಾವ್ ಅಂಬಾಗಿಲು

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳು ಅಥವಾ ಇತರ ಯಾವುದೇ ವಿಷಯಗಳ ಬಗ್ಗೆ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

-ಸಂ.

## ಚಿಂತನ

ಈ ಜಗತ್ತಿನಲ್ಲಿ ಅನೇಕ ಮಹಾಪುರುಷರು ಆಗಿ ಹೋಗಿದ್ದಾರೆ. ಅವರೆಲ್ಲರ ಹೆಸರನ್ನು ನಮ್ಮಲ್ಲನೇಕರು ಆಗಾಗ ನೆನಪಿಸಿಕೊಳ್ಳುವುದೂ ಇದೆ. ಅಲ್ಲದೆ ಹಲವರು ಅವರಲ್ಲಿರುವ ಆದರ್ಶಗಳನ್ನು ತಾವೂ ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಅವರಂತೆ ಆಗಬೇಕೆಂದು ಆಶೆಪಡುವುದೂ ಇದೆ.


ಈ ಮಹಾಪುರುಷರ ಆದರ್ಶ ಗುಣಗಳು ನಮಗೆ ನೋಡಲು, ಅಥವಾ ಕೇಳಲು ಹಿತವಾಗಿಯೇ ಇರುತ್ತದೆ. ಆದರೆ ಆಚರಣೆಗೆ ಬಲು ಕಷ್ಟವಾಗಿಯೇ ಇರುತ್ತದೆ. ಎಷ್ಟೇ ಪ್ರಯತ್ನಿಸಿದರೂ ಅವರ ಆ ಎಲ್ಲ ಆದರ್ಶ ಗುಣಗಳನ್ನು ನಮ್ಮದಾಗಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.

ಹಾಗೆಂದು ಸಾಧ್ಯವೇ ಇಲ್ಲವೆಂದು ಅರ್ಥವೂ ಅಲ್ಲ, ಸಾಧನೆ ಮಾಡಿದರೆ ಅದೂ ಸಾಧ್ಯವಾಗಬಹುದು. ಅವೆಲ್ಲಕ್ಕಿಂತಲೂ ಅವರ ಆದರ್ಶತೆಗಳಲ್ಲಿ ನಮಗೆ ಸಾಧ್ಯವಾಗುವ ಒಂದೆರಡು ವಿಚಾರಗಳನ್ನಾದರೂ ನಾವು ನಮ್ಮದಾಗಿಸಿಕೊಳ್ಳಲು ಪ್ರಯತ್ನಿಸಬೇಕು. ಈ ಪ್ರಯತ್ನದಲ್ಲಿ ನಾವು ಸಫಲತೆಯನ್ನು ಪಡೆದರೂ ಅದು ನಮ್ಮ ಜೀವನದ ಮಹತ್ಸಾಧನೆ ಎಂದರೆ ತಪ್ಪಲ್ಲ.

ಹೀಗೆ ನಾವು ನಮ್ಮ ಜೀವನದಲ್ಲಿ ಆದರ್ಶ ಪುರುಷರ ಜೀವನಗಳನ್ನು ಅಧ್ಯಯನ ಮಾಡಿ ಅವರಂತೆ ನಾವು ಆಗಬೇಕೆಂದಾದರೆ ಅವರ ಕೆಲವೇ ಕೆಲವು ಗುಣಗಳನ್ನಾದರೂ ನಮ್ಮದಾಗಿಸಿಕೊಳ್ಳೋಣ. ಆ ಮೂಲಕ ನಮ್ಮ ಜೀವನದಲ್ಲಿ ಸಾರ್ಥಕತೆಯನ್ನು ಪಡೆಯೋಣ ಎಂದು ತಿಳಿಯೋಣವೇ?

# ಶ್ರೀ ಕೃಷ್ಣಾಯನ

## (ಶ್ರೀ ಮದ್ಭಾಗವತಾನುಸಾರಿ)



**- ಕೆ. ಆತ್ಮಾರಾಮ ಶಾಸ್ತ್ರೀ**
**ಬೆಂಗಳೂರು**

(ಹಿಂದಿನ ಸಂಚಿಕೆಯಿಂದ...)

ಆದುದರಿಂದ ಕೃಷ್ಣ ಪರಮಾತ್ಮನು ಅವರೊಡನೆ ರಾಸಲೀಲೆಯಾಡಲು ಸಂತೋಷದಿಂದ ನಿರ್ಧರಿಸಿದನು. ಶ್ರೀಕೃಷ್ಣನು ಅವರೊಡನೆ ಕ್ರೀಡಿಸಲು ಒಪ್ಪಿದಾಗ ಅವರೆಲ್ಲ ಧನ್ಯತೆಯಲ್ಲಿ ಮಿಂದರು. ನೂರಾರು ಗೋಪಿಯರು ನಂದಕಂದನನ್ನು ಮಧ್ಯದಲ್ಲಿ ನಿಲ್ಲಿಸಿಕೊಂಡು ಅವನ ಸುತ್ತಲೂ ಹಾಡಲು, ನರ್ತಿಸಲು ತೊಡಗಿದರು. ಕೃಷ್ಣನೂ ಅವರನ್ನೆಲ್ಲ ಯಮುನೆಯ ತಡಿಗೆ ಕರೆದುಕೊಂಡು ಹೋಗಿ ಬಗೆ ಬಗೆಯಾಗಿ ಅವರೊಡನೆ ಕ್ರೀಡಿಸಿದನು. ಹೀಗೆ ಬಹಳ ಹೊತ್ತು ಕಳೆದಾಗ ಗೋಪಿಯರಲ್ಲಿ ಅಹಮಿಕೆಯೂ, ತಾವೇ ಶ್ರೇಷ್ಠರೆಂಬ ತುಚ್ಛ ಲೌಕಿಕ ಭಾವವೂ ತಲೆದೋರಿತು. ಅದನ್ನು ಹೋಗಲಾಡಿಸಿ, ಅವರನ್ನು ಶುದ್ಧೀಕರಿಸಿ ಅನುಗ್ರಹಿಸಬೇಕೆಂದು ನಿಶ್ಚಯಿಸಿದ ಭಗವಂತನು ಅವರ ಮಧ್ಯದಿಂದ ಅಂತರ್ಧಾನ ಹೊಂದಿದನು.

ಇದಕ್ಕಿದ್ದಂತೆ ಮಾಯವಾದ ತಮ್ಮ ವಲ್ಲಭನನ್ನು ಕಾಣದೆ ವ್ರಜಾಂಗನೆಯರು ತಮ್ಮ ಗುಂಪಿನ ಒಡೆಯನಾದ ಗಜರಾಜನನ್ನು ಕಾಣದ ಹೆಣ್ಣಾನೆಗಳಂತೆ ಪರಿತಪಿಸಿದರು. ವಿರಹದ ಪ್ರಖರ ಬೆಂಕಿಯಲ್ಲಿ ಬೆಂದರು. ಉನ್ಮಾದದಿಂದ ಚಿತ್ರವಿಚಿತ್ರವಾಗಿ ವರ್ತಿಸಲಾರಂಭಿಸಿದರು. ತಾವೇ ಕೃಷ್ಣ ಸ್ವರೂಪೆಯರೆಂಬ ಭ್ರಮೆಗೊಳಗಾದರು. ಆದುದರಿಂದ ಕೃಷ್ಣನಂತೆ ನಡೆಯುವುದು, ನುಡಿಯುವುದು, ಕುಣಿಯುವುದು ಮಾಡಿದರು. ಹೀಗೆ ಅವರು ಕೃಷ್ಣಮಯರಾಗಿ ಬಿಟ್ಟರು. ಸ್ವಲ್ಪ ಹೊತ್ತಿನಲ್ಲೇ ಅವರ ಭ್ರಮೆ ಕಳೆದು ಕೃಷ್ಣವಿರಹದಿಂದ ಸಂತಪಿಸಿದರು. ಅಲ್ಲಿ ಇಲ್ಲಿ ಕೃಷ್ಣನನ್ನು ಹುಡುಕಾಡ ತೊಡಗಿದರು. ವನದಿಂದ ವನಕ್ಕೆ ಓಡಾಡಿದರು. ಮರು, ಗಿಡ, ಬಳ್ಳಿಗಳನ್ನು 'ಕೃಷ್ಣರಾಯನನ್ನು ನೋಡಿದಿರಾ? ಎಲ್ಲಡಗಿದ್ದಾನೆಂಬುದನ್ನು ತಿಳಿಸುವಿರಾ!' ಎಂದು ಕೇಳುತ್ತಿದ್ದರು. ಮುಂದೆ ಹೋಗುತ್ತಿದ್ದಂತೆ ಅವರಿಗೆ ಮನುಷ್ಯನ ಹೆಜ್ಜೆಗಳು ಕಾಣಿಸಿದವು. ಅವರು ಗಮನವಿಟ್ಟು ಆ ಹೆಜ್ಜೆಗಳನ್ನು ಪರಿಶೀಲಿಸಿದರು. ಆ ಹೆಜ್ಜೆಗಳಲ್ಲಿ ಶಂಖ, ಚಕ್ರಾದಿ ಚಿಹ್ನೆಗಳು ಕಂಡು ಬಂದವು. ಆ ಹೆಜ್ಜೆಗಳು ಕೃಷ್ಣನದೇ ಎಂಬುದು ಖಚಿತವಾಯಿತು. ಆ ಹೆಜ್ಜೆಗಳ ಜಾಡನ್ನು ಹಿಡಿದು ಅವರು ಮುಂದೆ ಮುಂದೆ ನಡೆದರು. ಆಗ ಅವರಿಗೆ ಒಬ್ಬ ಗೋಪ ಯುವತಿಯ ಹೆಜ್ಜೆಗಳೂ ಕಾಣಿಸಿದವು. 'ಆಹಾ! ಯಾವಳೋ ಭಾಗ್ಯವಂತೆಯಾದ ಗೊಲ್ಲರ ಹುಡುಗಿಯ ಹೆಜ್ಜೆಗಳಿವು. ನಮ್ಮ ಪ್ರಿಯತಮನ ಪ್ರಿಯತಮೆಯಾದ ಅವಳು ಅದೆಷ್ಟು ಜನ್ಮಗಳಲ್ಲಿ ಪುಣ್ಯವನ್ನು ಸಂಪಾದಿಸಿರುವಳೋ! ಓಹೋ, ಇಲ್ಲಿಂದೆ ಮುಂದೆ ಆ ತರುಣಿಯ ಹೆಜ್ಜೆಗಳು ಗೋಚರಿಸುತ್ತಿಲ್ಲ. ಇದರರ್ಥವೇನು? ನಮ್ಮ ಶ್ಯಾಮ ಸುಂದರನು ಅವಳನ್ನು ಹೊತ್ತುಕೊಂಡು ಸಾಗಿರಬೇಕು. ಆದುದರಿಂದ ಅವನ ಹೆಜ್ಜೆಗಳು ಗಾಢವಾಗಿವೆ. ಇಲ್ಲಿ ನೋಡಿದರೆ ಅವನ ತುದಿಗಾಲಿನ ಗುರುತು ಮಾತ್ರ ಕಾಣಿಸುತ್ತಿದೆ. ಬಹುಶಃ ಅವನಿಲ್ಲಿ ತುದಿಗಾಲಲ್ಲಿ ನಿಂತು ತನ್ನ ವಲ್ಲಭೆಗೆ ಹೂಕುಯ್ದು ಕೊಡಲು ಪ್ರಯತ್ನಿಸಿರಬೇಕು. ಇಲ್ಲಿ ಇಬ್ಬರೂ ಕುಳಿತುಕೊಂಡ ಗುರುತು ಇದೆ. ಖಂಡಿತವಾಗಿಯೂ ನಮ್ಮ ಪ್ರಾಣಕಾಂತನು ಆ ಯುವತಿಯ ತಲೆಬಾಚಿ ಹೂ ಮುಡಿಸಿರಬೇಕು''. ಹೀಗೆ ಗೋಪಿಯರು ಪ್ರಲಪಿಸುತ್ತ ಅಲೆದಾಡಿದರು. ಅತ್ತ ಭಗವಂತನು ಯಾವ ಗೋಪವನಿತೆಯೊಡನೆ ವಿಹರಿಸುತ್ತಿದ್ದನೋ ಅವಳಿಗೆ ಅಹಂಕಾರ ತಲೆಗಡರಿತು. ಇದನ್ನರಿತ ಗೋಪೀಜನ ಮನೋಹಾರಿಯು ಅವಳನ್ನು ಬಿಟ್ಟು ಕಾಣೆಯಾದನು. ಅವಳು ವಿರಹಕಾತರಳಾಗಿ ಅಳತೊಡಗಿದಳು. ಆಗ ಅವನನ್ನು ಅರಸುತ್ತ ಅಲೆದಾಡುತ್ತಿದ್ದ ಗೋಪಸ್ತ್ರೀಯರು ಅಲ್ಲಿಗೆ ಬಂದರು. ಅವಳ ಅಳಲಿಗೆ ಕಾರಣವೇನೆಂದು ವಿಚಾರಿಸಿದರು. ಅವಳೆಂದಳು ''ಶ್ಯಾಮ ಸುಂದರನು ನನ್ನನ್ನು ಮಾತ್ರ ಪ್ರೇಮಿಸುವನೆಂದು ಭ್ರಮಿಸಿ ಗರ್ವಕ್ಕೆ ಒಳಗಾದೆ. ನನಗೆ ಅವನು ವಶನಾಗಿರುವನೆಂದು ಸೊಕ್ಕು ಬಂದದ್ದರಿಂದ ನನ್ನನ್ನು ಹೊತ್ತುಕೊಂಡು ಹೋಗುವಂತೆ ಆಜ್ಞಾಪಿಸಿದೆ. ಆಗ ಪ್ರಾಣವಲ್ಲಭನು ಅಂತರ್ಧಾನನಾದನು. ಜಗತ್ತನ್ನೇ ಸೃಷ್ಟಿಸಿ ಆಳುವ ಆ ಭಗವಂತನನ್ನು ನಾನು ಅವಮಾನಿಸಿದೆ. ಇದು ನನ್ನ ಅಪರಾಧ. ಇದಕ್ಕೆ ತಕ್ಕ ಶಿಕ್ಷೆಯಾಗಿದೆ.'' ಹೀಗೆಂದು ವಿಲಪಿಸಿದಳು. ಮಿಕ್ಕ ಗೋಪಿಯರೂ ಭಗವಂತನನ್ನು ಕರೆಯುತ್ತ ರೋದಿಸಿದರು. ಆಗ ನಂದನಂದನು ಅವರ ಮಧ್ಯದಲ್ಲಿ ಪ್ರತ್ಯಕ್ಷನಾದನು. ಅವನನ್ನು ನೋಡುತ್ತಲೇ ಗೋಪಿಯರ ಹೋದ ಹರಣ ಮರಳಿ ಬಂದಂತಾಯಿತು. ಅವರು ಆನಂದದಿಂದ ಉನ್ಮತ್ತೆಯರೇ ಆದರು. ಪ್ರತಿಯೊಬ್ಬರೂ ತಮಗಿಷ್ಟಬಂದಂತೆ ಅವನೊಡನೆ ನಡೆದುಕೊಂಡರು. ಕೆಲವರು ಅವನ ಮುಖವನ್ನೇ ನೋಡುತ್ತ ಮೈಮರೆತರು. ಕೆಲವರು ಅವನ ಕೈಗಳನ್ನು ಹಿಡಿದುಕೊಂಡು ತಮ್ಮ ಕೆನ್ನೆಗಳಿಗೆ ಒತ್ತಿಕೊಂಡರು. ಇನ್ನು ಕೆಲವರು ಅವನ ತೋಳುಗಳಿಂದ ತಮ್ಮ ಹೆಗಲುಗಳನ್ನು ಬಳಸಿಕೊಂಡರು. ಮತ್ತೆ ಕೆಲವರು ಅವನ ಮುದ್ದು ಪಾದಗಳನ್ನು ಚುಂಬಿಸಿದರು. ಭಗವಂತನು ಮುಗುಳುನಗುತ್ತ ಈ ವಿವಿಧೋಪಚಾರಗಳನ್ನು ತೃಪ್ತಿಯಿಂದ ಸ್ವೀಕರಿಸಿದನು. ಆದರೆ ಹೊರಗಡೆ ಬೇರೆ ಯಾವುದೇ ಪ್ರತಿಕ್ರಿಯೆಯನ್ನು ತೋರ್ಪಡಿಸಲಿಲ್ಲ. ಇದರಿಂದ ಗೋಪಿಯರಿಗೆ ಸ್ವಲ್ಪ ಬೇಸರ ಮತ್ತು ಕೋಪ ಬಂತು. ಅವರು ಕೇಳಿದರು, ''ನಮ್ಮ ಪುರುಷೋತ್ತಮನೆ, ಕೆಲವರು ಪ್ರೀತಿಸುವವರನ್ನು ಪ್ರೀತಿಸುತ್ತಾರೆ. ಕೆಲವರು ಪ್ರೀತಿಸದವರನ್ನೂ ಪ್ರೀತಿಸುತ್ತಾರೆ. ಮತ್ತೆ ಕೆಲವರು ಎರಡು ಬಗೆಯವರನ್ನೂ ಪ್ರೀತಿಸುವುದಿಲ್ಲ. ಇವರಲ್ಲಿ ಯಾರು ಸರಿ ಎಂಬುದು ನಿನ್ನ ಅಭಿಪ್ರಾಯ? ಹೇಳು ನೋಡೋಣ'' ಆಗ ಕೃಷ್ಣನೆಂದನು, ''ಗೋಪಿಯರಿರಾ, ಯಾರು ತಮ್ಮನ್ನು ಪ್ರೀತಿಸುವವರನ್ನು ಪ್ರೀತಿಸುತ್ತಾರೋ ಅವರು ಸ್ವಾರ್ಥಿಗಳು. ಅವರದ್ದು ಕೊಡುಕೊಳ್ಳುವ ವ್ಯವಹಾರವಷ್ಟೆ. ಪ್ರೀತಿಸದವರನ್ನು ಪ್ರೀತಿಸುವವರು ನಿಜವಾಗಿಯೂ ತಂದೆ ತಾಯಿಯರಂತೆ ದಯಾಪರರು. ಅವರದ್ದು ನಿಃಸ್ವಾರ್ಥ ಪ್ರೇಮ. ಅದು ಧರ್ಮ ಮತ್ತು ನಿಜವಾದ ಸೌಹಾರ್ದ. ಮೂರನೆಯ ಬಗೆಯವರನ್ನು ಏನೆಂದು ವರ್ಣಿಸುವುದು? ಪ್ರೀತಿಸಿದವರನ್ನು ಪ್ರೀತಿಸದವರಲ್ಲಿ ನಾಲ್ಕು ವಿಧವಿದೆ- ಆತ್ಮಾರಾಮರು, ಆಪ್ತಕಾಮರು, ಅಕೃತಜ್ಞರು, ಗುರುದ್ರೋಹಿಗಳು. ಆತ್ಮಾರಾಮರೆಂದರೆ ಬ್ರಹ್ಮಾನಂದದಲ್ಲಿ ಮುಳುಗಿದವರು. ಆಪ್ತಕಾಮರೆಂದರೆ ಎಲ್ಲ ಬಯಕೆಗಳನ್ನು ಕೈಗೂಡಿಸಿಕೊಂಡವರು, ಜೀವನ್ಮುಕ್ತರಾದವರು. ಅಕೃತಜ್ಞರೆಂದರೆ ಕೃತಘ್ನರು. ಗುರುದ್ರೋಹಿಗಳು ಗುರು ಹಿರಿಯರನ್ನು ವಂಚಿಸುವವರು. ಆದರೆ ನಾನು ಪ್ರೀತಿಸುವವರನ್ನು ಪ್ರೀತಿಸುವುದರಲ್ಲಿ ಸ್ವಾರ್ಥಲೇಪವಿಲ್ಲ. ಪ್ರೀತಿಸುವವರ ಶ್ರೇಯಸ್ಸನ್ನೇ ನಾನು ಚಿಂತಿಸುತ್ತಿರುತ್ತೇನೆ. ನೀವೆಲ್ಲ ನನ್ನ ಮೇಲಿನ ಪ್ರೇಮದಿಂದ ಲೋಕಮರ್ಯಾದೆಯನ್ನು, ಶಾಸ್ತ್ರ ಮರ್ಯಾದೆಯನ್ನು ಮತ್ತು ಸ್ವಜನರನ್ನು ಬಿಟ್ಟು ಇಲ್ಲಿಗೆ ಬಂದಿದ್ದೀರಿ. ನಿಮ್ಮೀ ಪ್ರೇಮದ ಋಣ ನನ್ನ ಮೇಲೆ ಎಂದೆಂದಿಗೂ ಇರುತ್ತದೆ. ನಿಮ್ಮನ್ನು ಪರೀಕ್ಷಿಸಲೆಂದೇ ನಾನು ಮಾಯವಾದೆ. ನೀವಿ ಪರೀಕ್ಷೆಯಲ್ಲಿ ಗೆದ್ದಿದ್ದೀರಿ. ನನ್ನಲ್ಲಿ ದೋಷವನ್ನು ಕಾಣಬೇಡಿ''.

(ಮುಂದುವರಿಯುವುದು)

## ಹೊಸ ಬೆಳಕು

**ನಲ್ನುಡಿ :**

**ಸರ್ವರೂಪಮಯೀ ದೇವೀ ಸರ್ವಂ ದೇವೀಮಯಂ ಜಗತ್ ।**
**ಅತೋಽಹಂ ವಿಶ್ವರೂಪಾಂ ತ್ವಾ ನಮಾಮಿ ಪರಮೇಶ್ವರೀಮ್ ॥**

ಅಂದರೆ ದೇವಿಯು ಸರ್ವರೂಪಮಯಿಯು, ಜಗತ್ತೆಲ್ಲವೂ ದೇವಿಮಯವು. ಆದುದರಿಂದ, ವಿಶ್ವರೂಪಳೂ ಪರಮೇಶ್ವರಿಯೂ ಆದ ನಿನಗೆ ನಾನು ನಮಸ್ಕರಿಸುತ್ತೇನೆ.

**ಪುಸಕ ಪರಿಚಯ :**

**ವೈದ್ಯೋ ನಾರಾಯಣೋ ಹರಿಃ**
**ಶ್ರೀಸಾಮಾನ್ಯ ಮಹಾನುಭಾವರಾದ ಹಳೆಯಂಗಡಿ ಸುಬ್ರಾಯ (ಹರಿ) ಭಟ್ಟರ ವ್ಯಕ್ತಿ ಪರಿಚಯ**
*ನಿರೂಪಕರು :*
**ಯಚ್. ಶಿವಚಂದ್ರ ಭಟ್, ಹಳೆಯಂಗಡಿ**
*ಪ್ರಕಾಶಕರು :* **ಶ್ರೀ ಹರಿವಂಶ ಪ್ರತಿಷ್ಠಾನಂ, ಹಳೆಯಂಗಡಿ, ಮಂಗಳೂರು**
*ಬೆಲೆ :* **ರೂ.100/-**

ಶ್ರೀ ಸುಬ್ರಾಯ ಭಟ್ಟರ ಕುರಿತು ಅವರ ಸುಪುತ್ರ ಶ್ರೀ ಶಿವಚಂದ್ರ ಭಟ್ಟರು ತಮ್ಮ ತೀರ್ಥರೂಪರ ಹಲವಾರು ಚಿಕಿತ್ಸಾ ವಿಧಾನಗಳನ್ನು, ಜೀವನ ದರ್ಶನ ಗಳನ್ನೊಳಗೊಂಡ ''ವೈದ್ಯೋ ನಾರಾಯಣೋ ಹರಿಃ'' ಎಂಬ ಕಿರು ಹೊತ್ತಗೆಯನ್ನು ಬರೆದಿದ್ದಾರೆ. ಶ್ರೀ ಶಿವಚಂದ್ರ ಭಟ್ಟರು ಕೃತಿಯ ''ಒಳಗಿನ ಗುಟ್ಟು...'' ತಿಳಿಸಿದಂತೆ- ''ಶ್ರೀಯುತ ಸುಬ್ರಾಯ ಭಟ್ಟರು ತನ್ನ 84 ವರ್ಷಗಳ ಸುದೀರ್ಘ ಜೀವನದಲ್ಲಿ ಯಾವುದೇ ರೀತಿಯ ಸನ್ಮಾನ, ಅಭಿನಂದನೆ, ಅವರ ಕುರಿತಾದ ಲೇಖನಗಳನ್ನು ಪ್ರಕಟಿಸುವಂತಹ ವೈಯ್ಯಕ್ತಿಕ ವೈಭವೀಕರಣವನ್ನು ಸೌಜನ್ಯಪೂರ್ವಕ ತಿರಸ್ಕರಿಸುತ್ತಿದ್ದರು. ಆದರೆ ಚಾರಿತ್ರಿಕ, ಬೌದ್ಧಿಕ ಮಹತ್ವದ ವಿಷಯಗಳ ಸಂರಕ್ಷಣೆಗೆ ಸದಾ ಪ್ರೋತ್ಸಾಹಿಸುತ್ತಿದ್ದರು. ಆದುದರಿಂದ ಅವರ ''ಮಹಾಪ್ರಯಾಣ''ದ ಬಳಿಕ ಅವರ ಕೈಕಂಡ ಪ್ರಯೋಗಗಳ ಮಹತ್ವವನ್ನರಿತು ಅದನ್ನು ಈ ರೀತಿಯ ಕೃತಿಯ ಮೂಲಕ ಪ್ರಕಟಿಸ ಬೇಕೆಂಬ ಅವರ ಅಭಿಮಾನಿಗಳ ಒತ್ತಡಕ್ಕೆ ಮಣಿದು ಈ ಹೊತ್ತಗೆಯನ್ನು ಲಿಪಿಬದ್ಧಗೊಳಿಸಿರುತ್ತೇನೆ.''

ಕೃತಿಯ ''ಭಾವನಾ ಸಂಚಯ''ದಲ್ಲಿ ಪೂಜ್ಯಶ್ರೀ ಬ್ರಹ್ಮಾನಂದ ಸರಸ್ವತಿ ಹೇಳುತ್ತಾರೆ.. ಪೂಜ್ಯ ಶ್ರೀ ರಮಣ ಮಹರ್ಷಿಗಳು ಅರುಣಾಚಲದಲ್ಲಿ 55 ವರ್ಷಗಳ ಕಾಲ ಒಂದೇ ಕಡೆ ಇದ್ದು, ಯಾವ ಊರಿಗೂ ಹೋಗದೆ, ಯಾವ ಕ್ಷೇತ್ರದರ್ಶನಕ್ಕೂ ಮನಸ್ಸು ಮಾಡದೆ, ತಾವಿರುವ ಕ್ಷೇತ್ರವನ್ನೇ ಪರಮ ಪಾವನ ಕ್ಷೇತ್ರವನ್ನಾಗಿ ಪರಿವರ್ತಿಸಿಕೊಂಡವರು. ಅವರ ಮಹಾನಿರ್ಯಾಣದ ಬಳಿಕ, ಅಂತಹ ಪೂಜ್ಯರ ಹೆಸರಿನ ಸಾಲಿನಲ್ಲಿ ಹೆಸರಿಸಲು ಯೋಗ್ಯವಾದ ವ್ಯಕ್ತಿ ''ಮಾಯ''. ನಾನೊಂದು ದಿನ ಮಾಯನಲ್ಲಿ ಕೇಳಿದೆ. ಮಾಯ, ನಿಮಗೆ ಹೊರಗೆ ಹೋಗುವ ಇಚ್ಛೆ ಇಲ್ಲವೆ? ಎಂದು. ಅದಕ್ಕವರು ಹೇಳಿದರು. ನೋಡು, ನಮ್ಮ ಮನಸ್ಸು ಪ್ರಶಾಂತವಾಗಿ ನಿರ್ಮಲವಾಗಿದ್ದರೆ ನಾವು ಎಲ್ಲಿದ್ದೇವೆಯೋ ಅದೇ ಪುಣ್ಯಕ್ಷೇತ್ರ. ಮನಸ್ಸು ನಿರ್ಮಲವಾಗಿ ಇಲ್ಲದಿದ್ದರೆ ಪುಣ್ಯಕ್ಷೇತ್ರಗಳಿಗೆ ಹೋಗಿಯೂ ಪ್ರಯೋಜನ ಇಲ್ಲ. ಹೀಗೆ ಸುಮ್ಮನೆ ತಿರುಗಾಡಿ ಬರುವ ಯಾವ ಪುರಷಾರ್ಥ ಸಾಧನೆಯೂ ಇಲ್ಲ. ನಾವು ಇರುವ ಜಾಗದಲ್ಲಿ, ನಾಲ್ಕು ಜನರಿಗೆ ಉಪಕಾರ ಆಗುವಂತೆ ಬದುಕುವುದೇ ಸಾರ್ಥಕ ಬದುಕು. ಅವರು ಈ ರೀತಿ ನುಡಿದಂತೆ ತನ್ನ ಕೊನೆಯ ಕಾಲದವರೆಗೂ ನಡೆದಿದ್ದರು.

ಈ ಕೃತಿಯನ್ನು ಹೊರತರುವಲ್ಲಿ ಅದಮ್ಯ ಉತ್ಸಾಹದಿಂದ ದುಡಿದವರು ಮಾಯನ ಆಶೀರ್ವಾದಕ್ಕೆ ಪಾತ್ರರಾದ ಕೇದಿಗೆ ವಸಂತರಾವ್ ಮತ್ತು ಶ್ರೀಮತಿ ರೂಪ ವಸಂತ ರಾವ್ ದಂಪತಿಗಳು.

**– ವೈ. ಮೋಹನ ರಾವ್.**

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ

## ಸನಾತನ ಧರ್ಮ ಗುರುವಿಗೆ ಸರ್ವೋನ್ನತ ಸ್ಥಾನವನ್ನು ನೀಡಿದೆ.....

(...1ನೇ ಪುಟದಿಂದ)

ಸಿಕ್ಕಿದಾಗ ಲೆಲ್ಲಾ ಇಲ್ಲಿಗೆ ಬರುತ್ತೇನೆ. ಭಕ್ತರ ಎದುರಿಗೆ ಶಾರದಾ ಚಂದ್ರಮೌಳೀಶ್ವರ ಪೂಜೆ ಮಾಡುತ್ತೇನೆ. ಇದು ನನಗೆ ಅತ್ಯಂತ ಸಂತೋಷ ನೀಡುತ್ತದೆ ಎಂದರು. ಅಭಿವಂದನಾ ಪತ್ರದಲ್ಲಿ ಶಿಷ್ಯವರ್ಗ ಭಿನ್ನವಿಸಿಕೊಂಡ ಶೃಂಗೇರಿ ಮಠ ಶಾಖೆಯ ಸ್ಥಾಪನೆಯೂ ಈಶ್ವರೇಚ್ಛೆ ಇದ್ದರೆ ಸಾಧ್ಯವಾದೀತು ಎಂದು ಹೇಳಿ ಶಿಷ್ಯವೃಂದವನ್ನು ಅನುಗ್ರಹಿಸಿದರು. ಶ್ರೀ ಶ್ರೀ ಶೃಂಗೇರಿ ಜಗದ್ಗುರುಗಳಿಗೆ ಅಭಿವಂದನಾ ಪತ್ರವನ್ನು ಸಂಘದ ಅಧ್ಯಕ್ಷ ಶ್ರೀ ಸಿ.ಎಸ್.ರಾವ್, ಕಾರ್ಯದರ್ಶಿ ಬಿ. ಕೃಷ್ಣಮೂರ್ತಿ ರಾವ್, ಕೋಶಾಧಿಕಾರಿ ಡಾ| ವೈ.ಎಸ್.ರಾವ್ ಹಾಗೂ ಉಡುಪಿ ಶೃಂಗೇರಿ ಜಗದ್ಗುರುಗಳ ಸ್ವಾಗತ ಸಮಿತಿಯ ಪ್ರಫುಲ್ಲಚಂದ್ರರು ಅರ್ಪಿಸಿದರು. ಹೆಚ್.ಕೃಷ್ಣ ಭಟ್‌ರವರ ವೇದಮಂತ್ರದೊಂದಿಗೆ ಪ್ರಾರಂಭಗೊಂಡ ಸಭೆಯಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಸ್.ರಾವ್ ಸ್ವಾಗತಿಸಿದರು. ವೇ|ಮೂ| ವಾಗೀಶ ಶಾಸ್ತ್ರಿಗಳು ಮಾನಪತ್ರವನ್ನು ವಾಚಿಸಿದರು. ಶ್ರೀ ವೇಣು ಗೋಪಾಲರಾಯರು ಕಾರ್ಯಕ್ರಮವನ್ನು ನಿರೂಪಿಸಿ, ಕೊನೆಯಲ್ಲಿ ವಂದಿಸಿದರು. ಸಭೆಯ ನಂತರ ಗುರುಗಳಿಗೆ ಸಮಷ್ಟಿ ದೀಕ್ಷೆ ಅರ್ಪಿಸಲಾಯಿತು. ನಂತರ ಶ್ರೀ ಜಗದ್ಗುರುಗಳು ಸಮಸ್ತ ಭಕ್ತಾದಿಗಳಿಗೆ ಫಲ ಮಂತ್ರಾಕ್ಷತೆಯನ್ನು ಅನುಗ್ರಹಿಸಿದರು.

ಜೂನ್ 6ರಂದು ಸಂಜೆ ಶ್ರೀಶಾರದಾ ಮಂಟಪಕ್ಕೆ ಶ್ರೀ ಜಗದ್ಗುರುಗಳು ಆಗಮಿಸಿದಾಗ ಸ್ವಾಗತಗೋಪುರದ ಸಮೀಪ ಅವರನ್ನು ಎದುರುಗೊಂಡು ವೇ| ಮೂ| ವಾಸುದೇವ ಉಪಾಧ್ಯಾಯರ ನೇತೃತ್ವದಲ್ಲಿ ವೇದಘೋಷ ಪೂರ್ಣಕುಂಭ ಸ್ವಾಗತ ನೀಡಿ ಬರಮಾಡಿಕೊಳ್ಳಲಾಯಿತು. ಶ್ರೀಶಾರದಾ ದೇವಸ್ಥಾನಕ್ಕೆ ಆಗಮಿಸಿದ ಶ್ರೀಗಳು ಶಾರದಾ ದೇವಿಯ ಪೂಜೆಯನ್ನು ವೀಕ್ಷಿಸಿದರು. ಶ್ರೀಶಾರದಾ ಮಂಟಪದಲ್ಲಿ ಅವರಿಗೆ ಶ್ರೀ ಸಿ.ಎಸ್.ರಾವ್ ದಂಪತಿಗಳು ಧೂಳಿ ಪಾದಪೂಜೆ ಮಾಡಿದರು. ಆಹ್ನಿಕಕ್ಕೆ ತೆರಳಿದ ಗುರುಗಳು ಮರಳಿ ಬಂದು ಶ್ರೀಶಾರದಾ ಮೌಳೀಶ್ವರ ಪೂಜೆ ನಡೆಸಿದರು. ಮಂಟಪದ ಸಭಾಭವನ ಭಕ್ತಾದಿಗಳಿಂದ ತುಂಬಿತ್ತು. ಪಾದಪೂಜೆ, ಭಜನೆ, ಸ್ತೋತ್ರ ಪಠಣಗಳು ನಡೆಯುತ್ತಲೇ ಇದ್ದುವು. ನಮ್ಮ ಸಮಾಜದವರಲ್ಲದೇ ಕರಾಡ, ವೈಶ್ಯವಾಣಿ, ಶೆಟ್ಟಿಗಾರ್, ರಾಜಾಪುರ, ಮೊದಲಾದ ಇತರ ಶಿಷ್ಯವರ್ಗದ ಭಕ್ತಾದಿಗಳಿಂದಲೂ ಪಾದಪೂಜೆ ನಡೆಯಿತು. ಸುಮಾರು 2 ಗಂಟೆಗಳ ಕಾಲ ನಡೆದ ಶ್ರೀಶಾರದಾ ಚಂದ್ರಮೌಳೀಶ್ವರ ಪೂಜೆಯನ್ನು ನೆರೆದ ಭಕ್ತರು ಶ್ರದ್ಧಾಭಕ್ತಿಯಿಂದ ವೀಕ್ಷಿಸಿದರು. ನಂತರ ನಡೆದ ಅನ್ನಸಂತರ್ಪಣೆಯಲ್ಲಿ ಸುಮಾರು 400ಕ್ಕೂ ಅಧಿಕ ಸಂಖ್ಯೆಯಲ್ಲಿ ಭಕ್ತಾದಿಗಳು ಪ್ರಸಾದ ಸ್ವೀಕರಿಸಿದರು. ಸೋಮವಾರ ಬೆಳಿಗ್ಗೆ ಆಶೀರ್ವಚನ ಕಾರ್ಯಕ್ರಮದ ನಂತರ ಆನೆಗೊಂದಿ ಸಂಸ್ಥಾನದ ಕಾಳಹಸ್ತೇಂದ್ರ ಸ್ವಾಮಿಗಳ ಪಟ್ಟಾಭಿಷೇಕ ಕಾರ್ಯಕ್ರಮ ನೆರವೇರಿಸಲು ತೆರಳಿದ ಶ್ರೀ ಶ್ರೀಗಳು ಮಧ್ಯಾಹ್ನ ಮರಳಿ ಬಂದಾಗ ಶ್ರೀಶಾರದಾ ದೇವಸ್ಥಾನದಲ್ಲಿ ಮಹಾಪೂಜೆ ನಡೆಯಿತು. ನಂತರ ನೆರೆದ ಶಿಷ್ಯವೃಂದಕ್ಕೆ ಅನ್ನಸಂತರ್ಪಣೆ ನಡೆಯಿತು. ಸಂಜೆ 4 ಗಂಟೆಗೆ ಗುರುಗಳು ಶಾರದಾ ಮಂಟಪದಿಂದ ಹೊರಟು ಶೃಂಗೇರಿಗೆ ತೆರಳಿದರು. ಎರಡೂ ದಿನಗಳ ಕಾರ್ಯಕ್ರಮದಲ್ಲಿ ಗುರುಗಳ ಜೊತೆ ಅವರ ವೈದಿಕ ವರ್ಗ, ಶೃಂಗೇರಿ ಶಾರದಾ ಪೀಠದ ಧರ್ಮಾಧಿಕಾರಿಗಳಾದ ಶ್ರೀ ಸತ್ಯಶಂಕರ ಬೊಳ್ಳಾವ ಹಾಗೂ ಹೆಚ್.ವಿ.ನರಸಿಂಹಮೂರ್ತಿಗಳು, ಉಡುಪಿ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಪದಾಧಿಕಾರಿಗಳು-ಸದಸ್ಯರೂ, ಮಂಗಳೂರು ಸುಬ್ರಹ್ಮಣ್ಯ ಸಂಘದ ಪದಾಧಿಕಾರಿಗಳೂ-ಸದಸ್ಯರೂ, ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನದ ಧರ್ಮದರ್ಶಿ ಡಾ| ಹೆಚ್. ನಿರಂಜನ್ ಭಟ್ ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಶ್ರೀಶಾರದಾ ಮಂಟಪದಲ್ಲಿ ಸಾಮೂಹಿಕ ಉಪನಯನ ಹಾಗೂ ಶಂಕರ ಜಯಂತಿ ಆಚರಣೆ

(...1ನೇ ಪುಟದಿಂದ)



ಪೀಠಗಳನ್ನು ಸ್ಥಾಪಿಸಿದರು. ವರ್ಷದಲ್ಲಿ ಒಂದು ದಿನವಾದರೂ ಇಂತಹ ಮಹಾತ್ಮರ ಬಗ್ಗೆ ತಿಳಿದುಕೊಳ್ಳುವುದು ನಮ್ಮೆಲ್ಲರ ಕರ್ತವ್ಯ ಎಂದು ನಿವೃತ್ತ ಪ್ರಾಧ್ಯಾಪಕರಾದ ಸಾಂತೂರು ಸದಾಶಿವರಾಯರು ತಿಳಿಸಿದರು. ಅವರು ತಾ.19-5-2010ರಂದು ಶ್ರೀಶಾರದಾ ಮಂಟಪದ ಜ್ಞಾನಮಂದಿರದಲ್ಲಿ ನಡೆದ ಶಂಕರಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಪ್ರವಚನ ನೀಡಿದರು.


ಸಭಾ ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಸಿ. ಎಸ್. ರಾವ್‌ರವರು ಸ್ವಾಗತ ಭಾಷಣ ಮಾಡಿದರು. ಸಂಘದ ಕಾರ್ಯದರ್ಶಿ ಶ್ರೀ ಬಿ.ಕೃಷ್ಣಮೂರ್ತಿ ರಾಯರು ಸಾಂತೂರು ಸದಾಶಿವರಾಯರ ಕಿರುಪರಿಚಯವನ್ನು ನೀಡಿದರು. ಶೃಂಗೇರಿ ಮಠದಿಂದ ಕಳುಹಿಸಿದ ಸ್ಮರಣಿಕೆ ಹಾಗೂ ಶಾಲನ್ನು ನೀಡಿ ಗೌರವಿಸಿದ ಸಂಘದ ಅಧ್ಯಕ್ಷರಾದ ಶ್ರೀ ಸಿ. ಎಸ್.ರಾಯರು ಎಲ್ಲರಿಗೂ ಧನ್ಯವಾದನ್ನಿತ್ತರು.

**ಶ್ರೀಶಾರದಾ ಮಂಟಪದಲ್ಲಿ ಸಾಮೂಹಿಕ ಉಪನಯನ :**

ತಾ.19-5-2010ರಂದು ಬುಧವಾರ ಪೂರ್ವಾಹ್ನ ಶಂಕರ ಜಯಂತಿಯ ಶುಭ ಸಂದರ್ಭದಲ್ಲಿ ನಮ್ಮ ಸಮಾಜದ ವಟುಗಳಾದ ಅಕ್ಷಯ, ಧನರಾಜ್, ಪವನ್ ಇವರಿಗೆ ಶ್ರೀ ಜಗದೀಶ ಉಪಾಧ್ಯಾಯರ ಪೌರೋಹಿತ್ಯದಲ್ಲಿ ಬೆಳಿಗ್ಗೆ 10.45ರ ಶುಭ ಮುಹೂರ್ತದಲ್ಲಿ ಬ್ರಹ್ಮೋಪದೇಶ ನೀಡಲಾಯಿತು. ಈ ಕಾರ್ಯಕ್ರಮದಲ್ಲಿ ವಟುಗಳ ಸಂಬಂಧಿಕರು, ಸಮಾಜ ಬಾಂಧವರು ಅಲ್ಲದೇ ಸಂಘದ ಪದಾಧಿಕಾರಿಗಳು ಹಾಗೂ ಸದಸ್ಯರು ಪಾಲ್ಗೊಂಡರು. ಬಳಿಕ ಶ್ರೀಶಾರದಾ ದೇವಸ್ಥಾನದಲ್ಲಿ ಶ್ರೀಶಾರದಾ ಮಾತೆ, ಶ್ರೀಗಣಪತಿ ಹಾಗೂ ಶ್ರೀ ಶಂಕರರಿಗೆ ವಿಶೇಷ ಪೂಜಾ ಕಾರ್ಯಕ್ರಮ ಜಗದೀಶ ಉಪಾಧ್ಯಾಯರ ನೇತೃತ್ವದಲ್ಲಿ ನೆರವೇರಿತು. ಮಧ್ಯಾಹ್ನ ಮಹಾಮಂಗಳಾರತಿ, ಪ್ರಸಾದ ವಿತರಣೆ ಹಾಗೂ ಅನ್ನಸಂತರ್ಪಣೆ ನೆರವೇರಿತು.

# ಮರೂರು ಶ್ರೀ ದುರ್ಗಾಪರಮೇಶ್ವರೀ ಕ್ಷೇತ್ರ ಮಹಾತ್ಮ್ಯೆ

# ಭಾಮಿನೀ ಷಟ್ಪದಿ ಕಾವ್ಯ, ದೇವಿಗೆ ಸಮರ್ಪಣೆ




ಕುಂದಾಪುರ ತಾಲೂಕಿನ ಪ್ರಸಿದ್ಧ ಕಾರಣಿಕ ಕ್ಷೇತ್ರವಾಗಿರುವ ಮರೂರು ಶ್ರೀ ದುರ್ಗಾಪರಮೇಶ್ವರೀ ಕ್ಷೇತ್ರ ಮಹಾತ್ಮ್ಯೆಯನ್ನು ಭಾಮಿನೀ ಷಟ್ಪದಿ ಕಾವ್ಯ ರೂಪದಲ್ಲಿ ಹರಿದಾಸರೂ, ಯಕ್ಷಗಾನ ತಾಳಮದ್ದಳೆ ಅರ್ಥಧಾರಿಯೂ, ನಿವೃತ್ತ ಕನ್ನಡ ಉಪನ್ಯಾಸಕರೂ ಆದ ಕವಿ ಶ್ರೀ ಮನಾಹೆಬ್ಬಾರರು ಬರೆದು ಪ್ರಕಟಪಡಿಸಿದ್ದು, ಶ್ರೀ ಕ್ಷೇತ್ರ ಮರೂರಿನಲ್ಲಿ ಈ ಕಾವ್ಯವನ್ನು ಇತ್ತೀಚೆಗೆ ದೇವಿಗೆ ಸಮರ್ಪಿಸಲಾಯಿತು. ಕವಿ ದಂಪತಿಗಳು ಫಲ, ಹೂ-ಹಣ್ಣುಗಳ ತಟ್ಟೆಯಲ್ಲಿ ಕಾವ್ಯದ ಪ್ರತಿಗಳನ್ನಿಟ್ಟು ಶ್ರೀದೇವಿಗೆ ಪ್ರದಕ್ಷಿಣೆ ಬಂದು ಸಮರ್ಪಿಸಿದರು. ಅರ್ಚಕ ಶ್ರೀ ಶ್ರೀಧರ ಬಾಯಿರಿಯವರು ಪುಸ್ತಕಗಳನ್ನು ಅನಾವರಣಗೊಳಿಸಿ, ಆರತಿ ಬೆಳಗಿ ಕವಿಗಳಿಗೆ ಮರಳಿಸಿದರು.

ನಂತರ ನಡೆದ ಸಭಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಉಡುಪಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಶ್ರೀ ಅಂಬಾತನಯ ಮುದ್ರಾಡಿ ಇವರು ವಹಿಸಿದ್ದರು. ಹಿರಿಯಡಕ ಸರಕಾರಿ ಪ್ರಥಮದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ| ಪಾದೆಕಲ್ಲು ವಿಷ್ಣು ಭಟ್ಟ, ಹೆಬ್ರಿಯ ಪ್ರಸಿದ್ಧ ಉದ್ಯಮಿ ಶ್ರೀ ಹೆಚ್. ಭಾಸ್ಕರ ಜೋಯಿಸ್ ಇವರು ಮುಖ್ಯ ಅತಿಥಿಗಳಾಗಿದ್ದರು. ಕಾವ್ಯದ ಕವಿ ಶ್ರೀ ಮನಾ ಹೆಬ್ಬಾರರು ಆರಂಭದಲ್ಲಿ ಅತಿಥಿಗಳನ್ನು ಸಭೆಗೆ ಪರಿಚಯಿಸಿ, ಸ್ವಾಗತಿಸಿ, ಕಾವ್ಯದ ವಿವರಣೆಯನ್ನು ನೀಡಿದರು. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಶ್ರೀ ನೀಲಾವರ ಲಕ್ಷ್ಮೀನಾರಾಯಣ ರಾವ್ ಇವರು ಕಾವ್ಯವನ್ನು ವಾಚಿಸಿದರು. ಇವರ ಗಮಕಕ್ಕೆ ಶ್ರೀ ಮನಾ ಹೆಬ್ಬಾರರು ವ್ಯಾಖ್ಯಾನವನ್ನಿತ್ತರು. ಅತಿಥಿಗಳಾದ ಡಾ| ಪಾದೆಕಲ್ಲು ವಿಷ್ಣು ಭಟ್ಟರು ತನ್ನ ಭಾಷಣದಲ್ಲಿ ಭಾಷೆಯ ಬೆಳವಣಿಗೆಯ ಕುರಿತು ವಿವರಣೆಯನ್ನಿತ್ತು ಕಾವ್ಯವನ್ನು ಸಮಗ್ರವಾಗಿ ವಿಮರ್ಶಿಸಿದರು. ಇನ್ನೋರ್ವ ಅತಿಥಿ ಶ್ರೀ ಭಾಸ್ಕರ ಜೋಯಿಸ್‌ರವರು ಕವಿಗಳಿಗೆ ಶುಭ ಹಾರೈಸಿದರು.

ಕವಿ ಶ್ರೀ ಮನಾಹೆಬ್ಬಾರರು ಧನ್ಯವಾದವಿತ್ತರು.

# ಶ್ರೀ ಮನಾಹೆಬ್ಬಾರರಿಗೆ ಕಬ್ಬಿನಾಲೆಯಲ್ಲಿ ಕವಿ ಸಂಮಾನ




ಕಬ್ಬಿನಾಲೆ ಮೇಲುಮಠ ಶ್ರೀ ಲಕ್ಷ್ಮೀ ನಾರಾಯಣ ದೇವಸ್ಥಾನದಲ್ಲಿ ಕೊಡಮಣಿತ್ತಾಯ ಬ್ರಹ್ಮಪರಿವಾರ ದೈವಗಳ ಪುನರ್‌ಪ್ರತಿಷ್ಠಾ ಕಲಶೋತ್ಸವದ ಶುಭ ಸಂದರ್ಭದಲ್ಲಿ ನಿವೃತ್ತ ಉಪನ್ಯಾಸಕರಾದ ಹರಿದಾಸ, ಕಲಾವಿದ, ಕವಿ ಶ್ರೀ ಮನಾಹೆಬ್ಬಾರರನ್ನು ಊರಿನ ಸಮಸ್ತರ ವತಿಯಿಂದ 'ಷಟ್ಪದಿ ಕವಿ' ಎಂದು ಸಂಮಾನಿಸಲಾಯಿತು. ಧಾರ್ಮಿಕ ಸಭೆಯ ದಿವ್ಯ ಸಾನಿಧ್ಯ ವಹಿಸಿದ್ದ ಬಾಳೆಕುದ್ರು ಶ್ರೀಮಠದ ಶ್ರೀ ಶ್ರೀ ನೃಸಿಂಹಾಶ್ರಮ ಸ್ವಾಮಿಗಳವರು ಶ್ರೀ ಹೆಬ್ಬಾರರನ್ನು ಶಾಲು, ಹಾರ, ಫಲಮಂತ್ರಾಕ್ಷತೆ, ನೆನಪಿನ ಕಾಣಿಕೆ ಗಳನ್ನಿತ್ತು ಸಂಮಾನಿಸಿದರು. ಕಾರ್ಕಳ ಕ್ಷೇತ್ರದ ಜನಪ್ರಿಯ ಶಾಸಕ ಶ್ರೀ ಹೆಚ್. ಗೋಪಾಲ ಭಂಡಾರಿಯವರು ಮುಖ್ಯ ಅತಿಥಿಗಳಾಗಿದ್ದರು. ದೇವಸ್ಥಾನದ ಆಡಳಿತ ಮೊಕ್ತೇಸರ ಶ್ರೀ ಕೆ. ಮೋಹನ ಹೆಬ್ಬಾರ್‌ರವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಹೆಬ್ಬಾರ್‌ರವರು ತನಗಿತ್ತ ಸನ್ಮಾನಕ್ಕೆ ಕೃತಜ್ಞತೆ ಸೂಚಿಸಿ, 'ಪರಿವರ್ಧಿನೀ ಷಟ್ಪದಿ'ಯಲ್ಲಿ ಅಂದಿನ ಸಮಾರಂಭದ ವರ್ಣನೆ ಮಾಡಿದರು. ಆರಂಭದಲ್ಲಿ ಶ್ರೀ ಕೆ. ಜಲಂಧರ ಹೆಬ್ಬಾರ್ ಪರಿಚಯಿಸಿ, ಕೊನೆಯಲ್ಲಿ ಶ್ರೀ ಕೆ. ಶ್ರೀನಿವಾಸ ಭಟ್ ಧನ್ಯವಾದವಿತ್ತರು. ಶ್ರೀ ಕೆ. ಸೀತಾರಾಮ ಹೆಬ್ಬಾರರು ಕಾರ್ಯಕ್ರಮ ನಿರೂಪಿಸಿದರು.

## ವಿಜಯಾ ಕಾಲೇಜು ಮುಲ್ಕಿ ಇದರ ಹಳೇ ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿ ಆಯ್ಕೆ

ವಿಜಯಾ ಕಾಲೇಜು ಮುಲ್ಕಿ ಇದರ ವಾರ್ಷಿಕೋತ್ಸವ ನಡೆದ ಸಂದರ್ಭದಲ್ಲಿ, ಹಳೇ ವಿದ್ಯಾರ್ಥಿ ಸಂಘದ ಸಭೆಯಲ್ಲಿ 2010-2011ನೇ ಸಾಲಿಗೆ ನಮ್ಮವರೇ ಆದ ಡಾ| ಬಿ. ಯಚ್. ರಾಘವ ರಾಯರು ಸರ್ವಾನುಮತದಿಂದ ಸಂಘದ ಮುಂದಿನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಈ ಹಿಂದೆಯೂ 3 ಬಾರಿ ಅಧ್ಯಕ್ಷ ಪದವಿಗೇರಿದ್ದ ಇವರು ಸಂಘದ ಅತೀ ಚುರುಕಿನ ಸದಸ್ಯ ಎಂಬ ಹೆಗ್ಗಳಿಕೆಗೂ ಒಳಗಾಗಿದ್ದಾರೆ. ಇವರ ವತಿಯಿಂದ ಕಳೆದ 28 ವರ್ಷಗಳಿಂದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಾರ್ಷಿಕೋತ್ಸವದಂದು ಸನ್ಮಾನ ನಡೆಯುತ್ತಿದೆ. ಇವರು ಕಳೆದ 3 ವರ್ಷಗಳಿಂದ ಮುಲ್ಕಿ ಬೈಪಾಸ್ ರಸ್ತೆ ಹೋರಾಟ ಸಮಿತಿಯ ಅಧ್ಯಕ್ಷರಾಗಿದ್ದು, ಇದರ ಪ್ರಯುಕ್ತ ಡೆಲ್ಲಿಗೆ, ಬೆಂಗಳೂರಿಗೆ ಭೇಟಿಕೊಟ್ಟು ಹಲವು ಗಣ್ಯರನ್ನು ಭೇಟಿಯಾದ ತಂಡದ ಮುಖ್ಯಸ್ಥರಾಗಿದ್ದಾರೆ.

ವರದಿ : ಬಿ. ಕೃಷ್ಣರಾಜ್‌ರಾವ್, ಬಪ್ಪನಾಡು

# ''ಹರಿಕಥೆ'' ಅಪೇಕ್ಷಿತವೇ? ಅನಪೇಕ್ಷಿತವೇ? - ೪



**- ಹರಿದಾಸ ಮ.ನಾ.ಹೆಬ್ಬಾರ**
**ಎಂ.ಎ., ಬಿ.ಎಡ್.**

ಹರಿಕಥೆಯಲ್ಲಿ ಪೀಠಿಕೆ :- ಹರಿದಾಸನು ತಾನು ಪ್ರಸ್ತುತಪಡಿಸುವ ಕಥೆಗೆ ಅನುಗುಣವಾಗಿ ಇರುವಂತೆ, ಅನ್ವಯವಾಗುವಂತೆ ಆ ದಿನದ ಕಾರ್ಯಕ್ರಮದ ಪೀಠಿಕೆಯನ್ನು ಅಳವಡಿಸಿ ಕೊಳ್ಳಬೇಕು. ಆ ದಿನದ ಹರಿಕಥೆಯು ಯಾವ ನೀತಿಯನ್ನು ಬೋಧಿಸುತ್ತದೆಯೋ ಆ ನೀತಿಯೇ ಪ್ರಮುಖವಾಗಿರುವ ಕೀರ್ತನೆ ಯೊಂದನ್ನು ಆಯ್ದುಕೊಂಡು ಅದರ ಒಂದೊಂದೇ ಚರಣಗಳನ್ನು ಹಾಡುತ್ತಾ ಅರ್ಥವನ್ನು ವಿವರಿಸಿ ಅಂದಿನ ಕಥೆಯ ನೀತಿಯನ್ನು ಅರ್ಥವತ್ತಾಗಿ ವಿವರಿಸಬೇಕು. ಇಂತಹ ನೀತಿಯನ್ನು ನಾವು ಪುರಾಣದ ಇಂತಹ ಕಥೆಯಿಂದ, ವ್ಯಕ್ತಿಯಿಂದ ಯಾ ಸನ್ನಿವೇಶದಿಂದ ತಿಳಿದುಕೊಳ್ಳಬಹುದು ಎಂಬ ನೀತಿಯನ್ನು ಹೇಳಿ ಅನಂತರ ನಿಧಾನವಾಗಿ ಆ ನೀತಿಯನ್ನು ಪ್ರತಿಪಾದಿಸುವ ಕಥೆಯ ಕಡೆಗೆ ಹೊರಳಬೇಕು. ಇದಕ್ಕೆ ಪೀಠಿಕೆಯೆನ್ನಬಹುದು. ಈ ಪೀಠಿಕೆಯು ಸಾಮಾನ್ಯವಾಗಿ, ನಡೆಯಿಸುವ ಹರಿಕಥೆಯ ಒಟ್ಟು ಸಮಯದ ನಾಲ್ಕನೇ ಒಂದು ಭಾಗದಷ್ಟಿದ್ದರೆ ಸಾಕು. ಅದಕ್ಕಿಂತ ಉದ್ದವಾದ ಪೀಠಿಕೆಯಿದ್ದರೆ ಅದು ಪ್ರೇಕ್ಷಕರಿಗೆ ಹಿಡಿಸಲಾರದು. ಅಂದರೆ ಕಥೆಯ ಸಮಯದ ಹರಹು ಎರಡು ತಾಸುಗಳಷ್ಟಿದ್ದರೆ ಪೀಠಿಕೆಯು ಸಾಮಾನ್ಯ ಮೂವತ್ತು ನಿಮಿಷಗಳ ಆಸುಪಾಸಿನಲ್ಲಿದ್ದರೆ ಮಾತ್ರ ಚೆನ್ನು. ಅದಕ್ಕಿಂತ ಹೆಚ್ಚಾದರೆ ಸಮರ್ಪಕವೆನಿಸಲಾರದು. ಸತ್ಯ-ಧರ್ಮ, ಮಾತಾ-ಪಿತರ ಸೇವೆ, ದೈವ ಭಕ್ತಿ, ಸಮಾಜ ಸೇವೆ ಇತ್ಯಾದಿ ತತ್ವಗಳಲ್ಲಿ ಒಂದನ್ನು ಆಯ್ದುಕೊಂಡು ಅದರ ವಿವರಣೆಯನ್ನು ಕೀರ್ತನೆಯ ಮೂಲಕವಾಗಿ ಕೊಟ್ಟು, ನಂತರ ಮುಖ್ಯ ಕಥೆಯ ಕಡೆಗೆ ಹೊರಳಬೇಕು.

ಪುರಾಣದ ಕಥೆಯಾಗಿದ್ದರೆ, ಮೂಲ ಕಥೆಯು ಪುರಾಣದ ಯಾವ ಗ್ರಂಥದ ಆಕರದಲ್ಲಿ ದೊರಕುತ್ತದೆಂಬುದನ್ನು ವಿವರಿಸಿ ಸಾಧ್ಯವಾದಷ್ಟು ಆ ಗ್ರಂಥದ ಮೂಲ ಪರಿಚಯ, ಕವಿ ವಿಚಾರ ಇತ್ಯಾದಿಗಳನ್ನು ತಿಳಿಸಿ, ಇಲ್ಲಿ ಸಾಹಿತ್ಯದ ಕುರಿತಾದ ಪ್ರಚಾರವನ್ನು ಮಾಡಿ, ಶ್ರೋತ್ರಗಳಿಗೆ ಸಾಹಿತ್ಯದಲ್ಲಿ ಆಸಕ್ತಿ ಹುಟ್ಟುವಂತೆ ಮಾಡಬೇಕು. ಹರಿಕಥೆಯ ಮೂಲಕವಾಗಿ ಸಾಹಿತ್ಯದ ಕುರಿತಾದ ಮಾಹಿತಿ ಮತ್ತು ಆ ಸಾಹಿತ್ಯ ಗ್ರಂಥದ ಮಹತ್ವಿಕೆಯನ್ನು ತಿಳಿಸಬೇಕು. ಹಾಗೆಯೇ ಮುಂದುವರಿದು ಕಥೆಯನ್ನು ಆರಂಭಿಸಬೇಕು. ಆಗ ಪ್ರೇಕ್ಷಕರ ಗಮನವನ್ನು ತನ್ನ ಕಡೆಗೆ ಸೆಳೆಯಲು ಹಾಗೂ ಸಭೆಯನ್ನು ಎಚ್ಚರವಾಗಿರಿಸಲು ಗೋವಿಂದ ನಾಮ ಸಂಕೀರ್ತನ ಇತ್ಯಾದಿಗಳನ್ನು ಹರಿದಾಸರು ತಾವುಹಾಡುವುದರೊಂದಿಗೆ ಸಭಿಕರಿಂದಲೂ ಹಾಡಿಸಬೇಕು. ಸಾಮಾನ್ಯ ಜ್ಞಾನ ಮತ್ತು ಪ್ರಚಲಿತ ವಿದ್ಯಮಾನಗಳ ಕುರಿತಾದ ತಿಳುವಳಿಕೆಯನ್ನು ಸಂದರ್ಭೋಚಿತವಾಗಿ ನೀಡಿ, ಹಾಸ್ಯ ಸನ್ನಿವೇಶಗಳು, ಘಟನೆಗಳು ಇವುಗಳ ವಿವರಣೆಯೊಂದಿಗೆ ಜನರನ್ನು ಉಲ್ಲಾಸ ಭರಿತರನ್ನಾಗಿರಿಸಲು ಪ್ರಯತ್ನಿಸಬೇಕು. ಹಾಸ್ಯ ಸನ್ನಿವೇಶಗಳನ್ನೊಳಗೊಂಡ ಉಪಕಥೆಗಳನ್ನು ಕೂಡಾ ಆರಂಭದಲ್ಲಿಯೇ ಸಂದರ್ಭೋಚಿತ ವಾಗಿ ಹೇಳಬಹುದು. ಕಥೆಯನ್ನು ಆರಂಭಿಸುವಾಗ ಆ ಕಥೆಯು ಪುರಾಣದ ಯಾವುದಾದರೂ ಗ್ರಂಥದಿಂದ ಆಯ್ದುಕೊಂಡು ದಾದರೆ ಆ ಗ್ರಂಥದ ಪೀಠಿಕೆಯ ನಾಂದಿ ಪದ್ಯವನ್ನು ಕಾವ್ಯಮಯವಾಗಿ ಹಾಡುವುದು ತುಂಬಾ ಅಪೇಕ್ಷಣೀಯ.

(ಮುಂದುವರಿಯುವುದು)

## ವೈ. ಅವನೀಂದ್ರನಾಥ ರಾವ್‌ರಿಗೆ ಸನ್ಮಾನ



**ದಿನಾಂಕ 28-03-2010ರಂದು ನಮ್ಮವರೇ ಆದ ಶ್ರೀ ಇನ್ನ ರಾಮಮೋಹನ ರಾವ್ ಅವರ ಮಹತ್ವದ ಕೃತಿ ''ನಾನು ಕಂಡ ನನ್ನ ದೇಶ'' ಬಿಡುಗಡೆ ಗೊಂಡಿತು. ಇದೇ ಸಂದರ್ಭದಲ್ಲಿ ಕೃತಿಯ ಸಂಪಾದಕರಾದ ವೈ. ಅವನೀಂದ್ರನಾಥ ರಾವ್ (ಅಸಿಸ್ಟೆಂಟ್ ಲೈಬ್ರೆರಿ ಇನ್ಫಾರ್ಮೇಶನ್ ಆಫೀಸರ್, ಸೆಂಟ್ರಲ್ ಸೆಕ್ರೆಟರಿಯೇಟ್ ಲೈಬ್ರೆರಿ, ದಿಲ್ಲಿ) ಇವರನ್ನು ಬಿಹಾರದ ಮಾಜಿ ರಾಜ್ಯಪಾಲ ಡಾ। ಎಂ. ರಾಮಾಜೋಯಿಸ್ ಸನ್ಮಾನಿಸಿದರು**

## ಬಪ್ಪನಾಡು : ಶಂಕರ ಜಯಂತಿ ಆಚರಣೆ

ಶಿವ ಬ್ರಾಹ್ಮಣ ಸಭಾ ಬಪ್ಪನಾಡು ಇವರು ಪ್ರತೀ ವರ್ಷದಂತೆ ಈ ವರ್ಷವೂ ಸಂಘದ ಸದಸ್ಯರ ಕೂಡುವಿಕೆಯಿಂದ ಶಂಕರ ಜಯಂತಿಯನ್ನು ಬಹಳ ಶ್ರದ್ಧಾ ಭಕ್ತಿಯಿಂದ ಆಚರಿಸಿದರು.

ಡಾ। ರಾಘವ ರಾವ್ ಮತ್ತು ಬಿ. ಕೃಷ್ಣರಾವ್‌ರವರ ಮುಂದಾಳುತನದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಬಿ.ರತ್ನಾಕರ ರಾಯರ ಮನೆಯಲ್ಲಿ ಮೇ 16 ಆದಿತ್ಯವಾರ ಶ್ರೀಯುತ ಅರುಣ್‌ಕುಮಾರ್ ಕಾರ್ನಾಡುರವರ ಪೌರೋಹಿತ್ಯದಲ್ಲಿ ನಡೆಯಿತು. ಮುಖ್ಯ ಅತಿಥಿಯಾಗಿ ಆಹ್ವಾನಿಸಲ್ಪಟ್ಟ ವೇದಪಂಡಿತ ಜಗದೀಶ್ ಉಪಾಧ್ಯಾಯರು, ಶಂಕರಾ ಚಾರ್ಯರ ಬಾಲ್ಯದಿಂದ ಹಿಡಿದು ಜೀವಿತಾವಧಿ ಯಲ್ಲಿ ಅವರ ಸಾಧನೆ, ಅದ್ವೈತ ಸಿದ್ಧಾಂತ ಬಗ್ಗೆ ಸವಿವರವಾಗಿ ತಿಳಿ ಹೇಳಿದರು. ಸೇರಿದ ಪ್ರತೀ ಮನೆಯವರಿಗೂ ಭಗವದ್ಗೀತೆ ಪುಸ್ತಕವನ್ನು ಹಂಚಿ (ಉಚಿತವಾಗಿ) ಒಂದೊಂದೇ ಅಧ್ಯಾಯವನ್ನು ಪಠಣ ಮಾಡಿ, ಕಂಠ ಪಾಠ ಮಾಡಬೇಕು, ಇದಕ್ಕೆ ಬೇಕಾದ ಸಹಕಾರವನ್ನು ಕೊಡಲಿದ್ದೇನೆಂದು ತಿಳಿಯಪಡಿಸಿದರು.

ಸುಮಾರು 30ರಿಂದ 40 ಮಂದಿ ಸೇರಿದ ಸಭೆಯಲ್ಲಿ ವಿಶೇಷ ಮಂಗಳಾರತಿ ನಡೆದ ನಂತರ ಪ್ರಸಾದ ವಿತರಣೆ, ಪಾನಕ, ಪಂಚಕಜ್ಜಾಯ ವಿತರಣೆ ನಡೆಯಿತು. ಸಂಘದವರು ಕಳೆದ 85 ವರ್ಷಗಳಿಂದ ನಡೆಸುತ್ತಾ ಬಂದ ಈ ಕಾರ್ಯಕ್ರಮವನ್ನು ಈ ಸಂದರ್ಭದಲ್ಲಿ ನೆನೆಯಬಹುದು.


ಎಚ್. ದೇವಾನಂದ್ ಭಟ್
Cell : 9845644556
ಶೋಭಾ ಡಿಜಿಟಲ್
ಸ್ಟುಡಿಯೋ ವೀಡಿಯೋ
ಉತ್ತಮ ಗುಣಮಟ್ಟದ ಫೋಟೋಗ್ರಾಫಿಗಾಗಿ ಸಂಪರ್ಕಿಸಿರಿ

ಬೆಳ್ವಾಯಿ-574213
(08258)-276177 (O), (918258)-324133 (O), 276777 (R)
ಎಡಪದವು - 574 164 (0824)-256374 (O) ಮಂಗಳೂರು, ದ.ಕ.


## ಶಾಲಿಪುರ (ಸಾಲ್ಯೂರು) ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಕೊಕ್ರಾಡಿ ಸಂಭ್ರಮದ ಬ್ರಹ್ಮಕಲಶೋತ್ಸವ

ಶಾಲಿಪುರ (ಸಾಲ್ಯೂರು) ಶ್ರೀ ಸುಬ್ರಹ್ಮಣ್ಯ ದೇವಸ್ಥಾನ ಕೊಕ್ರಾಡಿ ಇಲ್ಲಿನ ನವೀಕರಣ ಹಾಗೂ ಬಿಂಬ ಪುನಃ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮ ಕಲಶೋತ್ಸವ ಸಮಾರಂಭವು ದಿನಾಂಕ 6-4-2010ರಿಂದ 11-4-2010ರ ವರೆಗೆ ವಿವಿಧ ವೈದಿಕ, ಧಾರ್ಮಿಕ, ಸಾಂಸ್ಕೃತಿಕ, ಅನ್ನದಾನಾದಿ ಕಾರ್ಯಕ್ರಮಗಳು ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ ಪೂರ್ಣಾನುಗ್ರಹದೊಂದಿಗೆ, ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ರಾಜರ್ಷಿ ಪೂಜ್ಯ ಡಾ। ಡಿ. ವಿರೇಂದ್ರ ಹೆಗ್ಗಡೆಯವರ ಮಾರ್ಗ ದರ್ಶನದಲ್ಲಿ ಶ್ರೀ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ವೇದಮೂರ್ತಿ ಪಾವಂಜೆ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ಶ್ರದ್ಧೆಯಿಂದ ಭಕ್ತಿಯಿಂದ ನಡೆಯಿತು. ತಾ.6-4-2010 ಮಂಗಳವಾರ ಉಗ್ರಾಣ ಮುಹೂರ್ತ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕೊಕ್ರಾಡಿ-ಸಾವ್ಯ ಒಕ್ಕೂಟದ ವತಿಯಿಂದ ಸಾಮೂಹಿಕ ಸತ್ಯನಾರಾಯಣ ಪೂಜೆ, ದೇವಳದ ತಂತ್ರಿಗಳಿಗೆ ಋತ್ವಿಜರ ಸ್ವಾಗತ, ಶ್ರೀದೇವತಾ ಪ್ರಾರ್ಥನೆ, ಋತ್ವಿಗ್ವರಣ, ಪ್ರಾಸಾದ ಪರಿಗ್ರಹ, ಪ್ರಾಸಾದ ಶುದ್ಧಿ, ರಾಕ್ಷೋಘ್ನ ವಾಸ್ತು ಹೋಮಾದಿಗಳು, ಅಂಕುರಾರೋಪಣ ಕಾರ್ಯಕ್ರಮಗಳು ನಡೆಯಿತು.

ತಾ.7-4-2010 ಬುಧವಾರ ಪೂರ್ವಾಹ್ನ ಮಹಾಗಣಪತಿ ಹೋಮ, ನವಗ್ರಹ ಹೋಮ, ಮೃತ್ಯುಂಜಯ ಹೋಮ, ಮಂಟಪ ಸಂಸ್ಕಾರ, ಪ್ರವೇಶ ಬಿಂಬ ಶುದ್ಧಿ, ನವಕಲಶಾಭಿಷೇಕ, ಶಯ್ಯಾ ಕಲ್ಪನ, ಶಯ್ಯಾಧಿವಾಸ, ಷಡ್ಬಲ ಮಂಡಲ ಪೂಜಾ, ಜೀವಕಲಶ ಪ್ರತಿಷ್ಠಾ ಅಧಿ ವಾಸ ಹೋಮ, ಶಾಂತಿ ಹೋಮ, ರತ್ನಾನ್ಯಾಸ ಹೋಮ, ಅಷ್ಟಬಂಧ ಶಕ್ತಿ ಹೋಮ, ಶಿಖರ ಕಲಶಾಧಿವಾಸ ಮುಂತಾದ ವೈದಿಕ ಕಾರ್ಯಕ್ರಮಗಳು ನಡೆಯಿತು.

ತಾ.8-4-2010ನೇ ಗುರುವಾರ ಪೂರ್ವಾಹ್ನ 8-59ರ ವೃಷಭ ಲಗ್ನ ಸುಮುಹೂರ್ತದಲ್ಲಿ ಪ್ರಾಸಾದ ಪೂಜಾ, ರತ್ನನ್ಯಾಸಬಿಂಬ ನಯನ ಶ್ರೀ ಸುಬ್ರಹ್ಮಣ್ಯ ದೇವರ ಪ್ರತಿಷ್ಠೆ , ಅಷ್ಟಬಂಧ ಸ್ಥಾಪನೆ, ಜೀವ ಕಲಶಾಭಿಷೇಕ, ಶಿಖರ ಕಲಶ ಪ್ರತಿಷ್ಠಾ, ಪ್ರಸನ್ನ ಪೂಜಾ, ಕವಾಟ ಬಂಧನ, ಸ್ಕಂದ ಪ್ರೋಕ್ತ ಪ್ರಾಯಶ್ಚಿತ್ತ ಹೋಮ, ಅದ್ಭುತ ಶಾಂತಿ ಹೋಮ, ಗಣಪತಿ ಬಿಂಬ ಶುದ್ಧಿ, ಶಯ್ಯಾ ಕಲ್ಪನ ಕಾರ್ಯಕ್ರಮ ನಡೆಯಿತು.

ತಾ.9-4-2010ನೇ ಶುಕ್ರವಾರ ಪೂರ್ವಾಹ್ನ ವೃಷಭ ಲಗ್ನ ಸುಮುಹೂರ್ತದಲ್ಲಿ ಶ್ರೀ ಗಣಪತಿ ದೇವರ ಪ್ರತಿಷ್ಠೆ-ಕಲಶಾಭಿಷೇಕ, ಪ್ರಸನ್ನ ಪೂಜೆ, ಶ್ರೀ ಗಣಪತಿ ಅಥರ್ವಶೀರ್ಷ ಹೋಮ, ಇಂದ್ರಾದಿ ದಿಕ್ಪಾಲ ಪ್ರತಿಷ್ಠಾ ಕಾರ್ಯಕ್ರಮ ನಡೆಯಿತು. ಸಾಯಂಕಾಲ ಮಯೂರ ಬಿಂಬಶುದ್ಧಿ, ಅಧಿವಾಸ, ಪ್ರಾಯಶ್ಚಿತ್ತ ಹೋಮಗಳು, ಕೊಡಮಣಿತ್ತಾಯ ಅಣ್ಣಪ್ಪ ಪಂಜುರ್ಲಿ ದೈವಗಳ ಬಿಂಬ ಶುದ್ಧಿ, ಅದಿವಾಸ, ಮಹಾಬಲಿ, ಪೀಠಾಧಿವಾಸ ಕಾರ್ಯಕ್ರಮ ನಡೆಯಿತು.

ತಾ.10-4-2010ರಂದು ಪೂರ್ವಾಹ್ನ ಮಯೂರ ಪ್ರತಿಷ್ಠೆ, ದೈವಗಳ ಪ್ರತಿಷ್ಠೆ, ಮಾತೃಕಾದಿ ಬಲಿ ಶಿಲಾ ಪ್ರತಿಷ್ಠೆ, ಮಹಾಬಲಿ ಪೀಠ ಪ್ರತಿಷ್ಠೆ, ಸಾಯಂಕಾಲ ಕಲಶ ಮಂಡಲ ರಚನೆ, ಬ್ರಹ್ಮ ಕುಂಟಾದಿ ಪಂಚಶತ ಕಲಶ ಸ್ಥಾಪನೆ, ಅಧಿವಾಸ ಹೋಮಗಳು ನಡೆಯಿತು.

ತಾ.11-4-2010ರಂದು ಪೂರ್ವಾಹ್ನ 8-45ರ ವೃಷಭ ಲಗ್ನ ಸುಮುಹೂರ್ತದಲ್ಲಿ ಕವಾಟೋದ್ಘಾಟನೆ, ಶ್ರೀ ಸುಬ್ರಹ್ಮಣ್ಯ ದೇವರಿಗೆ ಪಂಚಶತ ಕಲಶ ಸಹಿತ ಬ್ರಹ್ಮಕಲಶಾಭಿಷೇಕ, ಪ್ರಸನ್ನ ಪೂಜೆ, ಉತ್ಸವ ಬಲಿ, ದರ್ಶನ ಬಲಿ, ಬಟ್ಟಲು ಕಾಣಿಕೆ, ಪಲ್ಲಪೂಜೆ, ಅನ್ನಸಂತರ್ಪಣೆ, ಸಾಯಂಕಾಲ ನಿತ್ಯಪೂಜೆ, ಮಹಾರಂಗ ಪೂಜೆ, ಉತ್ಸವ ಬಲಿ, ವಸಂತ ಮಂಟಪ ಪೂಜೆ, ಮಹೋತ್ಸವ ಮಂಗಲ, ಮಹಾಮಂತ್ರಾಕ್ಷತೆ ಬಳಿಕ ಪ್ರಸಾದ ವಿತರಣೆ ನಡೆಯಿತು.

ಪೂರ್ವಾಹ್ನವೇ ಆಗಮಿಸಿದ ಶ್ರೀ ಶ್ರೀ ನೃಸಿಂಹಾಶ್ರಮ ಮಹಾಸ್ವಾಮಿಗಳು, ಶ್ರೀ ಆದಿಶಂಕರಾಚಾರ್ಯ ವಾಗೀಶ್ವರೀ ಶಾರದಾ ಲಕ್ಷ್ಮೀನೃಸಿಂಹ ಸಂಸ್ಥಾನಮ್, ಬಾಳೆಕುದ್ರು ಹಂಗಾರಕಟ್ಟೆ ಇವರ ಮಾರ್ಗದರ್ಶನದಲ್ಲಿ ಬ್ರಹ್ಮಕಲಶೋತ್ಸವ ನಡೆದು, ಧಾರ್ಮಿಕ ಆಶೀರ್ವಚನ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಧರ್ಮಸ್ಥಳದ ಧರ್ಮಾಧಿಕಾರಿ ಡಾ। ಡಿ. ವಿರೇಂದ್ರ ಹೆಗ್ಗಡೆ ಯವರು ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ದೇವಳದ ರಚನೆ, ಹಮ್ಮಿಕೊಂಡ ಎಲ್ಲ ಕಾರ್ಯಕ್ರಮಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿ, ದೇವಳದ ಮಹತ್ವದ ಬಗ್ಗೆ ತಿಳಿಹೇಳಿದರು.

ಶ್ರೀಮತಿ ಶಕುಂತಲಾ ಮತ್ತು ಶ್ರೀ ಸುಬ್ರಹ್ಮಣ್ಯ ರಾವ್, ಸಾಕೇತ ಕೊಕ್ರಾಡಿ ಇವರ ಪ್ರಾಯೋಜಕತ್ವದಲ್ಲಿ ಶ್ರೀ ಗೋಪಾಲ ಕೃಷ್ಣ ಕೃಪಾ ಪೋಷಿತ ಯಕ್ಷಗಾನ ಮಂಡಳಿ, ಎಡನೀರು ಇವರಿಂದ ಯಕ್ಷಗಾನ ಬಯಲಾಟ ''ದಕ್ಷಯಜ್ಞ-ಷಣ್ಮುಖ ವಿಜಯ'' ನಡೆಯಿತು. ಹೀಗೆ ಆರು ದಿನಗಳ ಪರ್ಯಂತ ಪ್ರತಿದಿನ ಧಾರ್ಮಿಕ, ವೈದಿಕ, ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಬ್ರಹ್ಮಕಲಶೋತ್ಸವ ಸಂಪನ್ನಗೊಂಡಿತು.

ವರದಿ : **ಕೆ. ವಸಂತರಾವ್, ಬೆಳ್ತಂಗಡಿ**

# ಸಸ್ಯಾಹಾರ Vs ಮಾಂಸಾಹಾರ



**- ವೈ. ಶಂಕರನಾರಾಯಣ ರಾವ್, ಪಡುಬಿದ್ರಿ**

ನಾವು ಜೀವಿಸುತ್ತಿರುವ ಈ ವರ್ತಮಾನ ಕಾಲದಲ್ಲಿ ಪ್ರತಿಯೊಂದನ್ನೂ ಮತಾಚಾರಕ್ಕೆ ತಳಕು ಹಾಕುವ, ಅವಕಾಶಗಳು ದೊರಕಿದ ಸಂದರ್ಭಗಳಲ್ಲೆಲ್ಲಾ ಭಾಷಣಗಳ ಮೂಲಕವೂ ಬರಹಗಳ ಮೂಲಕವೂ ಸಾತ್ವಿಕರನ್ನೂ, ಆಸ್ತಿಕರನ್ನೂ ಟೀಕಿಸಿ ಕಟಕಿಯಾಡುವ ಬುದ್ಧಿಜೀವಿಗಳೆಂದು ತಮ್ಮನ್ನು ತಾವೇ ಕರೆಯಿಸಿಕೊಳ್ಳುವ ವರ್ಗವೊಂದು ಹುಟ್ಟಿಕೊಂಡಿದೆ. ಇವರು ತಮ್ಮನ್ನು ತಾವೇ ಬುದ್ಧಿಶಾಲಿಗಳೆಂದು ಭಾವಿಸಿರುವುದರಿಂದ ಇತರರ ಬ್ರೈನ್‌ವಾಶ್ ಮಾಡುವ ಹಕ್ಕೂ ತಮಗೆ ಇದೆ ಎಂದು ತಿಳಿದುಕೊಂಡಿರುವಂತಿದೆ. ಇವರ ಇತ್ತೀಚೆಗಿನ ಪ್ರಹಾರ ಸಸ್ಯಾಹಾರದ/ಸಸ್ಯಾಹಾರಿಗಳ ಮೇಲೆ ಆಗುತ್ತಿದ್ದು ಇವರ ಒಳಸುಳಿಗಳೂ ಉದ್ದೇಶಗಳೂ ಸ್ಫಟಿಕ ಶುದ್ಧ ಸ್ಪಷ್ಟ. ಇವರಿಗೆ 'ತಲೆ' ಇರುವುದರಿಂದ ಇವರ ವಾದಗಳೂ ಅಷ್ಟೇ ವಿಚಿತ್ರವಾಗಿದ್ದು ತಲೆಶೂಲೆ ತರುವಂತಿದೆ. ಇದಕ್ಕೊಪ್ಪುವಂತೆ ಸಸ್ಯಾಹಾರಿ ಕುಟುಂಬಗಳಿಗೆ ಸೇರಿದ ಇಂದಿನ ವಿದ್ಯಾವಂತ ಯುವಜನಾಂಗ 'ಪಬ್-ಬಾರ್' ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಸಾವಕಾಶವಾಗಿಯಾದರೂ ಮದ್ಯ-ಮಾಂಸಗಳತ್ತ ಆಕರ್ಷಿತವಾಗುತ್ತಿದೆ. ಈ 'ಬುದ್ಧಿಜೀವಿ'ಗಳ ಕುತರ್ಕಗಳನ್ನು ಆಧರಿಸಿ ಇಲ್ಲಿ ಒಂದು ಕಾಲ್ಪನಿಕ ಸಂವಾದವನ್ನು ಹೆಣೆಯಲಾಗಿದೆ. ಈ ಬರಹದ ಮುಖ್ಯ ಉದ್ದೇಶ ಸಮಾಜ ಬಾಂಧವರಲ್ಲಿ ಜಾಗೃತಿ ಮೂಡಿಸುವುದೇ ಆಗಿರುತ್ತದೆ. ಇಲ್ಲಿಯ ಕಾಲ್ಪನಿಕ ಸಂವಾದದಲ್ಲಿ "ಮಾಂ.ಬು.ಜೀ. ಎಂದರೆ ಮಾಂಸಾಹಾರ ಪರ ಬುದ್ಧಿಜೀವಿ" ಎಂದು ತಿಳಿದುಕೊಳ್ಳಬೇಕು.

1. ಮಾಂ.ಬು.ಜೀ.:-ಮಾಂಸಾಹಾರವಾಗಲೀ ಸಸ್ಯಾಹಾರವಾಗಲೀ ಒಂದು ಆಹಾರ ಪದ್ಧತಿ. ಹಿಂದೂಗಳು ಪೂಜಿಸುವ ಶ್ರೀರಾಮ, ಶ್ರೀಕೃಷ್ಣ ಮೊದಲಾದ ದೇವರುಗಳು ಮಾಂಸ ಭಕ್ಷಣೆ ಮಾಡುತ್ತಿದ್ದರು ಎನ್ನುವುದಕ್ಕೆ ಪುರಾಣಗಳಲ್ಲಿ ವಿವರಗಳಿವೆ. ಭಗವಾನ್ ಬುದ್ಧನೂ ವಿಶ್ವವಂದ್ಯ ವಿವೇಕಾನಂದರೂ ಮಾಂಸಾಹಾರಿಗಳು ಆಗಿದ್ದರು.

ಲೇಖಕ:- ನೀವು ಮಾಂಸಾಹಾರವನ್ನಾಗಲೀ ಸಸ್ಯಾಹಾರವನ್ನಾಗಲೀ ಒಂದು ಆಹಾರ ಪದ್ಧತಿ ಎಂದು ಒಪ್ಪುತ್ತಿರುವಂತೆಯೇ ಅದನ್ನು ಮತಾಚಾರಕ್ಕೆ ತಳಕು ಹಾಕುತ್ತಿದ್ದೀರಿ. ದಯವಿಟ್ಟು ಇದನ್ನು ನಿಲ್ಲಿಸಿರಿ. ಶ್ರೀರಾಮನು ಕ್ಷತ್ರಿಯ ಕುಲ ಸಂಭೂತನೂ, ಶ್ರೀ ಕೃಷ್ಣನು ಯಾದವ ಕುಲದವನೂ, ಬುದ್ಧನು ಶಾಕ್ಯ ರಾಜಮನೆತನದವನೂ, ವಿವೇಕಾನಂದರು ಕಾಯಸ್ಥ ಕುಲದವರೂ ಆಗಿದ್ದು ಇವರೆಲ್ಲರಿಗೂ ಮದ್ಯ-ಮಾಂಸ ವರ್ಜವಾಗಿರಲಿಲ್ಲ ಹಾಗೂ ಹುಟ್ಟು ಮಾಂಸಾಹಾರಿಗಳಾಗಿದ್ದರು. ಹೀಗಿದ್ದರೂ ಶ್ರೀರಾಮನು ಶಬರಿಯಿಂದ ಬುಗರಿಗೆಳನ್ನೂ, ಶ್ರೀ ಕೃಷ್ಣನು ಕುಚೇಲನಿಂದ ಅವಲಕ್ಕಿಯನ್ನೂ, ತಥಾಗತನು ಮನೆಗಳಿಂದ ದವಸ ಧಾನ್ಯದ ಭಿಕ್ಷೆಯನ್ನೂ, ವಿವೇಕಾನಂದರು ಚಿಕಾಗೋದಲ್ಲಿ ಮಹಿಳೆಯೊಬ್ಬಳಿಂದ ಹಣ್ಣುಗಳನ್ನೂ ಪಡೆದುಕೊಂಡು ಸೇವಿಸಿದ್ದರು; ಮಾಂಸಾಹಾರವನ್ನಲ್ಲ. ಇದನ್ನೇಕೆ ನೀವು ಹೇಳುವುದಿಲ್ಲ? ಇವರೆಲ್ಲರೂ ಅಹಿಂಸೆಯನ್ನು ಬೋಧಿಸುತ್ತಾ ಮಾಂಸಾಹಾರ ಸೇವಿಸುತ್ತಿದ್ದರೆ ಅವರು ಬೋಧಿಸುತ್ತಿದ್ದ ತತ್ವಗಳಿಗೂ ಸ್ವಂತದ ಆಚರಣೆಗಳಿಗೂ ತಾಳಮೇಳವಿರಲಿಲ್ಲವೆಂದು ತಿಳಿದುಕೊಳ್ಳಬೇಕೇ ವಿನಃ ಎಲ್ಲರೂ ಮಾಂಸಾಹಾರಿಗಳಾಗಬೇಕೆಂಬುದಕ್ಕೆ ಸಮರ್ಥನೆಯಾಗಲಾರದು.

2. ಮಾಂ.ಬು.ಜೀ.:- ರಾಮಕೃಷ್ಣ ಪರಮಹಂಸರು ತಮ್ಮ ವಚನ ವೇದದಲ್ಲಿ "ಒಬ್ಬ ಹಂದಿ ಮಾಂಸ ತಿನ್ನುತ್ತಿದ್ದರೂ ಅವನಿಗೆ ಸದ್‌ಭಾವನೆ ಇದ್ದರೆ ಅವನು ಉತ್ತಮ ವ್ಯಕ್ತಿ, ಅವನು ಸಾತ್ವಿಕ ಮನುಷ್ಯ" ಎಂದು ಹೇಳಿದ್ದಾರೆ. ಮಾಂಸಾಹಾರ ತಾಮಸಿಕ, ಸಸ್ಯಾಹಾರ ಸಾತ್ವಿಕ ಎಂಬುದು ಸುಳ್ಳು. ಸಾವಿರಾರು ಯಹೂದಿಗಳನ್ನು ಕೊಲ್ಲಿಸಿದ ನರಹಂತಕ ಹಿಟ್ಲರನು ಸಂಪೂರ್ಣ ಸಸ್ಯಾಹಾರಿ ಆಗಿದ್ದನಂತೆ.

ಲೇಖಕ:- "ಸಸ್ಯಾಹಾರಿಗಳಲ್ಲಿಯೂ ಮಾಂಸಾಹಾರಿಗಳಲ್ಲಿಯೂ ಉತ್ತಮರೂ ದುಷ್ಟರೂ ಸಮಾನವಾಗಿಯೇ ಇದ್ದಾರೆ"- ಇದು ನೀವು ಉಲ್ಲೇಖಿಸಿದ ವಚನದ ಸಾರ ಹೊರತು ಅದು ಮಾಂಸಾಹಾರವನ್ನು ಪುಷ್ಟೀಕರಿಸಲಿಕ್ಕೆ ಹೇಳಿದ್ದಲ್ಲ. "ಹಿಟ್ಲರ್ ಸಂಪೂರ್ಣ ಸಸ್ಯಾಹಾರಿಯಾಗಿದ್ದ ಅಂತೆ" ಎಂಬ ನಿಮ್ಮ ಅಂತೆಕಂತೆಗಳ ಹೇಳಿಕೆಗೆ ಆಧಾರಗಳೇನು? ಹಿಟ್ಲರನ ಪರ ಪ್ರಚಾರಕ್ಕೆ ಗೋಬೆಲ್ಸನ (ಹಿಟ್ಲರನ ಕುಖ್ಯಾತ ಪ್ರಚಾರ ಅಧಿಕಾರಿ) ಪುನರ್ಜನ್ಮ ಆಗಿದೆಯೇನು?

3. ಮಾಂ.ಬು.ಜೀ.:- ಖ್ಯಾತ ವಿಜ್ಞಾನಿಗಳೂ ನೋಬೆಲ್ ಬಹುಮಾನವನ್ನು ಪಡೆದವರಲ್ಲಿ ಹೆಚ್ಚಿನವರು ಗೋಮಾಂಸ, ಹಂದಿ ಮಾಂಸ ತಿನ್ನುತ್ತಿದ್ದವರೇ. ವಿಜ್ಞಾನದಲ್ಲಿ ಹೊಸ ಹೊಸ ಆವಿಷ್ಕಾರಗಳನ್ನೂ, ಸಂಶೋಧನೆಗಳನ್ನು ಪ್ರಕಟಪಡಿಸಿದವರೆಲ್ಲಾ ಮಾಂಸಾಹಾರಿಗಳೇ ವಿನಾ ಸಸ್ಯಾಹಾರಿಗಳಲ್ಲ, ಜಗತ್ತಿನ ಜನಸಂಖ್ಯೆಯಲ್ಲಿ ಶೇಕಡಾ 96 ಮಂದಿ ಮಾಂಸಾಹಾರಿಗಳು.

ಲೇಖಕ:- ಅಂತಹ ಮಹಾನ್ ವ್ಯಕ್ತಿಗಳೂ, ವಿಜ್ಞಾನಿಗಳೂ ಒಂದು ವೇಳೆ ಸಸ್ಯಾಹಾರಿಗಳಾಗಿದ್ದರೂ ಕೂಡಾ ನೋಬೆಲ್ ಬಹುಮಾನವನ್ನು ಪಡೆಯುವಷ್ಟು ಆವಿಷ್ಕಾರ- ಸಂಶೋಧನೆಗಳನ್ನು ಪ್ರಕಟಪಡಿಸುವಷ್ಟು ಪ್ರತಿಭಾಶಾಲಿಗಳು ಆಗಿರುತ್ತಿದ್ದರು ಎಂದೇಕೆ ಭಾವಿಸಬಾರದು? ಶಾಕಾಹಾರಿಗಳಲ್ಲಿಯೂ ಸಾಕಷ್ಟು ಮಂದಿ ಪ್ರತಿಭಾವಂತರೂ ವಿಜ್ಞಾನಿಗಳೂ ಇದ್ದಾರೆ. ಇದು ಸತ್ಯ. ಮಾನವನ ದೇಹರಚನೆ ಮಾಂಸಾಹಾರಕ್ಕೆ ಯೋಗ್ಯವಾದುದಲ್ಲ ಎಂದು ವೈಜ್ಞಾನಿಕವಾಗಿಯೇ ನಿರ್ಣಯಿಸಲ್ಪಟಿದೆ. "ಮಾಂಸಾಹಾರವನ್ನು ಸೇವಿಸಿ ನನ್ನ ಹೊಟ್ಟೆಯನ್ನು ಪ್ರಾಣಿಗಳ ಸ್ಮಶಾನವನ್ನಾಗಿ ಮಾಡಿಕೊಳ್ಳಲಾರೆ" ಎಂದಿದ್ದಾರೆ ಪ್ರಾಶ್ಚಾತ್ಯ ಸೆಲೆಬ್ರಿಟಿ ಒಬ್ಬರು. ಮಾಂಸಾಹಾರಿ ಕುಟುಂಬಗಳಲ್ಲಿ ಕೆಲವರು ಸಸ್ಯಾಹಾರಿಗಳೂ, ಸಸ್ಯಾಹಾರಿ ಕುಟುಂಬಗಳಲ್ಲಿ ಕೆಲವರು ಮಾಂಸಾಹಾರಿಗಳಿದ್ದಾರೆ. ಹೀಗಿರುವಾಗ ಜಗತ್ತಿನ ಶೇಕಡಾ 96 ಮಾಂಸಾಹಾರಿಗಳು ಎಂಬುದು ನಿಮ್ಮ ಸ್ವಂತದ ಸಂಶೋಧನೆ ಇರಬಹುದೇನೋ! ಒಂದು ವೇಳೆ ನಿಮ್ಮ ವಾದ ನಿಜವೇ ಆಗಿದ್ದರೂ ಸಸ್ಯಾಹಾರಿಗಳಾದ ನಾವು ಶೇಕಡ 4ರ ಅಲ್ಪಸಂಖ್ಯಾತ ವರ್ಗದಲ್ಲಿರವುದಕ್ಕೆ ಹೆಮ್ಮೆಪಡುತ್ತೇವೆ; ಅಲ್ಲದೇ ಸಸ್ಯಾಹಾರವನ್ನೇ ಇಷ್ಟ ಪಡುತ್ತೇವೆ.

4. ಮಾಂ.ಬು.ಜೀ.:- ಪ್ರಾಣಿಗಳನ್ನು ವಿನಾ ಕಾರಣ ಕೊಲ್ಲುವವನು ಕ್ರೂರ ಮೃಗಗಳಿಗಿಂತ ಕ್ರೂರಿ. ಆದರೆ ಆಹಾರದ ಅವಶ್ಯಕತೆಗಾಗಿ ಪ್ರಾಣಿಹತ್ಯೆ ಮಾಡಬಹುದು. ಆಹಾರಕ್ಕಾಗಿ ಪ್ರಾಣಿಗಳ ಹತ್ಯೆ ಮಾಡದಿದ್ದರೆ ಅವುಗಳ ಸಂಖ್ಯೆ ವಿಪರೀತ ಹೆಚ್ಚಿ ಪ್ರಕೃತಿಯ ಅಸಮತೋಲನ ಆಗುತ್ತದೆ. ಮನುಷ್ಯನಿಗೇ ವಾಸಿಸಲು ಸ್ಥಳ ಇಲ್ಲವಾದೀತು. ಸಮುದ್ರದಲ್ಲಿ ಮೀನುಗಳನ್ನು ಹಿಡಿಯದೆ ಬಿಟ್ಟರೆ ಬೇರೆ ಜಲಚರಗಳಿಗೆ ಜಾಗವಿಲ್ಲದಂತೆ ಆಗಬಹುದು. ಸೃಷ್ಟಿಯ ಜೀವಜಾಲದ ಆಹಾರ ಪದ್ಧತಿ ಈಗ ಸಹಜವಾಗಿಯೇ ಇದೆ ಎನ್ನಲಡ್ಡಿಯಿಲ್ಲ. "ಜೀವೋ ಜೀವಸ್ಯ ಜೀವತಿ" (ಜೀವಿಗಳು ಜೀವಿಗಳನ್ನೇ ತಿಂದುಜೀವಿಸುತ್ತವೆ) ಎಂಬ ಸೂಕ್ತಿ ಪರಿಸರಕ್ಕೆ ಅನುಸಾರವಾಗಿಯೇ ಇದೆ.

ಲೇಖಕ:- ಪ್ರಾಣಿಗಳನ್ನು ಕೊಲ್ಲುವ ಮನುಷ್ಯ ಕ್ರೂರ ಮೃಗಗಳಿಗಿಂತ ಕ್ರೂರಿ ಎಂದು ಒಪ್ಪುವ ನೀವು ಅಷ್ಟೇ ಸರಳವಾಗಿ ಅವುಗಳನ್ನು ಕೊಂದು ಹೊಟ್ಟೆ ತುಂಬಿಸಿಕೊಳ್ಳಬೇಕೆಂಬ ವಿತಂಡವಾದವನ್ನೂ ಹೂಡುತ್ತಿದ್ದೀರಿ. ಪ್ರಾಣಿಗಳ ಸಂಖ್ಯೆ ಹೆಚ್ಚುವುದು ಮಾಂಸಭಕ್ಷಣೆಯ ದುರಾಸೆಯಿಂದ ಅವುಗಳನ್ನು ಸಾಮೂಹಿಕವಾಗಿ ಸಾಕುವುದರಿಂದ. ಹೀಗೆ ದೊಡ್ಡ ಪ್ರಮಾಣದಲ್ಲಿ ಪ್ರಾಣಿಗಳನ್ನು ಸಾಕುವುದರಿಂದಲೇ ಹಕ್ಕಿ ಜ್ವರ, ಕೋಳಿ ಜ್ವರ, ಹಂದಿ ಜ್ವರ ಮೊದಲಾದ ರೋಗಗಳಿಂದ ಅವುಗಳು ಸಾಮೂಹಿಕವಾಗಿ ಸತ್ತು ಮನುಷ್ಯನಿಗೂ ರೋಗಗಳನ್ನು ದಾಟಿಸುತ್ತಿರುವುದು. ರಕ್ಷಿತ ಅರಣ್ಯಗಳಲ್ಲಿ ಕಾಡು ಪ್ರಾಣಿಗಳ ಸಂಖ್ಯೆ ಏಕೆ ಹೆಚ್ಚುವುದಿಲ್ಲ? ಹಸುಗಳಿಗೆ ಅಂಟಿದ ರೋಗ ಭಯದಿಂದ ಇಂಗ್ಲೆಂಡಿನಲ್ಲಿ ಸಾವಿರಾರು ದನಗಳ ಸಾಮೂಹಿಕ ಹತ್ಯೆ ಮಾಡಲಾಯಿತು ಹಾಗೂ ಗೋಮಾಂಸವನ್ನು ಹಲವು ಕಾಲ ನಿಷೇಧಿಸಲಾಯಿತು. ಪ್ರಾಣಿಗಳನ್ನು ಕೇವಲ ಮಾಂಸಾಹಾರಕ್ಕಾಗಿ ಜನ ಸಾಕುತ್ತಿರುವುದಲ್ಲ. ಅವುಗಳಿಂದ ಬೇರೆ ಉಪಯೋಗಗಳೂ ಇವೆ. ಉದಾ:- ಹಾಲುತ್ಪನ್ನಗಳು, ಉಣ್ಣೆ, ಗೊಬ್ಬರ, ಉಳುಮೆ ಇತ್ಯಾದಿಗಳು. ದನ-ಕರುಗಳನ್ನು ಸಾಕುವ ನಮ್ಮಂತಹ ಸಸ್ಯಾಹಾರಿಗಳಿಗೆ ಅವುಗಳೊಂದಿಗೆ ಭಾವನಾತ್ಮಕ ಸಂಬಂಧವಿದೆ. ನಾವು ಅವುಗಳಿಗೆ ಗಂಗೆ, ಗೌರಿ, ಕಪಿಲೆ ಮುಂತಾದ ಹೆಸರುಗಳನ್ನಿಟ್ಟು ಅವುಗಳನ್ನು ಮುದ್ದಿಸಿ ಪ್ರೀತಿಸಿದವರು. ಅವುಗಳೂ ನಮ್ಮನ್ನು ಪ್ರೀತಿಸಿವೆ. ಮೇವಿಗೆ ಗುಡ್ಡಕ್ಕೆ ಅಟ್ಟಿದ ಅವುಗಳನ್ನು ಅಪಹರಿಸಿ ಹತ್ಯೆ ಮಾಡಿ ಮುಕ್ಕುವ ಖೂಳರಿಗೆ, ಅವರನ್ನು ಬೆಂಬಲಿಸುವ ಬುದ್ಧಿಹೀನರಿಗೆ ಇವೆಲ್ಲ ಅರ್ಥವಾಗುವ ಸಂಗತಿಗಳಲ್ಲ. ಇನ್ನು ಜಲಚರಗಳ ವಿಷಯದಲ್ಲಿ ಹೇಳುವುದಾದರೆ ನಿಮ್ಮ ವಿಚಾರ ತೀರಾ ಅಸಂಬದ್ಧ. ಕೆಲವು ವರ್ಷಗಳ ಹಿಂದೆ ಮತ್ಸ್ಯಕ್ಷಾಮದಿಂದ ತತ್ತರಿಸುತ್ತಿದ್ದ ಕರಾವಳಿ ಜಿಲ್ಲೆಗಳನ್ನು ನೀವು ಕಂಡಿರಲಿಲ್ಲ ಎಂದು ಇದರಿಂದ ಸಾಬೀತಾಗುತ್ತದೆ. ಖಾಲಿ ದೋಣಿಗಳಲ್ಲಿ ಸಾಗರದಿಂದ ಹಿಂದಿರುಗುತ್ತಿದ್ದ ಮೀನುಗಾರರ ಜೋಲು ಮುಖಗಳನ್ನೂ ಅವರ ಸಂಸಾರಗಳ ದುರವಸ್ಥೆಯನ್ನೂ ನೀವು ಆಗ ನೋಡಬೇಕಿತ್ತು. "ಜೀವೋ ಜೀವಸ್ಯ ಜೀವತಿ" ಈ ತತ್ವ ಉಳಿಯಲು ಜೀವಿಗಳು ಜಗತ್ತಿನಲ್ಲಿ ಉಳಿದರೆ ತಾನೇ? ಪ್ರಪಂಚದಲ್ಲಿನ ಹಿಂಸ್ರ ಹಾಗೂ ಸಾಧು ಪ್ರಾಣಿಗಳ ಹತ್ಯೆ ಮಾನವನಿಂದ ಇದೇ ವೇಗದಲ್ಲಿ ಆಗುತ್ತಾ ಹೋದರೆ ಇನ್ನು ಕೆಲವೇ ದಶಕಗಳಲ್ಲಿ ಅವುಗಳ ಕೊನೆಯ ಕೊಂಡಿಗಳನ್ನು ಮೃಗಾಲಯಗಳಲ್ಲಿ ಮಾತ್ರ ನೋಡಬೇಕಾಗಬಹುದು. ಮನುಷ್ಯರು ಮನುಷ್ಯರನ್ನೇ ತಿಂದು ಮುಗಿಸುವ ಕಾಲವೂ ಬರಬಹುದು.

4. ಮಾಂ.ಬು.ಜೀ.:- ಸಸ್ಯಾಹಾರ ಮಾತ್ರ ಅಹಿಂಸಾತ್ಮಕವಾದುದು ಎಂಬುದು ತಪ್ಪು. ಸಸ್ಯಗಳಿಗೂ ಜೀವ ಇದೆ ಎಂದು ಸರ್.ಜಗದೀಶಚಂದ್ರ ಬೋಸ್ ಪ್ರಯೋಗದ ಮೂಲಕ ಸಿದ್ಧಪಡಿಸಿದ್ದಾರೆ. ಆದುದರಿಂದ ಸಸ್ಯಾಹಾರಿಗಳು ಅಹಿಂಸಾವಾದಿಗಳಲ್ಲ.

ಲೇಖಕ:- ಸಸ್ಯಾಹಾರ ಒಂದು ಆಹಾರ ಪದ್ಧತಿ ಎಂದು ನೀವೇ ಒಪ್ಪಿಕೊಂಡ ಮೇಲೆ ಇಲ್ಲಿ ಜೈವಿಕತೆಯ ಪ್ರಶ್ನೆ ಬರುವುದಿಲ್ಲ. ಸಸ್ಯಗಳಿಗೂ ಜೀವ ಇದೆ ಎಂಬುದು ಹೊಸತಾಗಿ ಕಂಡುಹಿಡಿದ ವಿಚಾರವೇನಲ್ಲ. ಒಂದು ಸಸ್ಯದಿಂದ ನೂರಾರು ಜೀವಿಗಳಿಗೆ-ಮಾನವರಿಗೆ ಆಮ್ಲಜನಕದಂತಹ ಜೀವ ಅನಿಲ ದೊರಕುತ್ತದೆ. ಇದನ್ನು ತಿಳಿದಿರುವ ನೀವೂ ನಿಮ್ಮ ಬುದ್ಧಿಜೀವಿಗೆಳೆಯರೂ ದೊಡ್ಡ ನಗರಗಳಲ್ಲಿ ಅಭಿವೃದ್ಧಿಯ ನೆವದಲ್ಲಿ "ಸಾವಿರಾರು ಮರಗಳನ್ನು ಕಡಿಯುವಾಗ ಏನು ಮಾಡುತ್ತಿದ್ದೀರಿ?" "ಸಸ್ಯಾಹಾರಿಗಳೆಲ್ಲರೂ ಹಿಂಸಾವಾದಿಗಳು" ಎಂಬುದು ತೀರಾ ಕುತರ್ಕದ ವಿಚಾರ. ನಮ್ಮ ಪೂರ್ವಿಕರು ಸಸ್ಯ ಸಂಕುಲಕ್ಕೆ ಸೇರಿದವುಗಳನ್ನು ಸಸ್ಯಾಹಾರವೆಂದು ವರ್ಗೀಕರಿಸಿದ್ದಾರೆ. ಹಾಗೆಯೇ ಪ್ರಾಣಿಜನ್ಯ ಆಹಾರವಾದ ಹಾಲು ಮತ್ತು ಅದರ ಉಪ ಉತ್ಪನ್ನಗಳು ಅವರಿಗೆ ವರ್ಜವಾಗಿರಲಿಲ್ಲ. ಈ ಆಹಾರಗಳನ್ನೇ ತಿಂದುಂಡು ಅವರು ಗಟ್ಟಿಮುಟ್ಟಾಗಿ 80-90 ವರ್ಷಗಳ ಕಾಲ ಆರೋಗ್ಯವಂತರಾಗಿಯೇ ಜೀವಿಸಿದ್ದರು. ಅವರ ಸಂತತಿಗಳಾದ ನಾವು ಈ ಈ ಸಸ್ಯಾಹಾರಗಳನ್ನೇ ಉಂಡು ಇಷ್ಟರ ವರೆಗೆ ಜೀವಿಸಿದ್ದೇವೆ. ಅದನ್ನು ಮಾಂಸಾಹಾರಕ್ಕೆ ಪರಿವರ್ತಿಸುವ ಇಚ್ಛೆಯಾಗಲೀ ಅಗತ್ಯವಾಗಲೀ ನಮಗೆ ಈ ವರೆಗೆ ಕಂಡು ಬಂದಿಲ್ಲ. ಈ ಗಂಧವತೀ ವಸುಂಧರೆ ನಮಗೆ ನಾವು ಬಯಸಿದ ಸಸ್ಯಾಹಾರವನ್ನು ಧಾರಾಳವಾಗಿಯೇ ನೀಡಿದ್ದಾಳೆ. ಇನ್ನೂ ನೀಡುತ್ತಾಳೆ ಎಂಬ ಭರವಸೆ ನಮ್ಮಲ್ಲಿದೆ.

5. ಮಾಂ.ಬು.ಜೀ.:- ನಾವು ಗೋಮಾಂಸ, ಹಂದಿ ಮಾಂಸ ಭಕ್ಷಣೆಯನ್ನು ನಿಮ್ಮೆದುರೇ ಸಾರ್ವಜನಿಕ ಸ್ಥಳಗಳಲ್ಲಿ ಮಾಡುತ್ತೇವೆ. ಇದು ನಮ್ಮ ಸವಾಲು. ನೀವೇನು ಮಾಡುವಿರಿ?

ಲೇಖಕ:- ನೀವು ಗೋಮಾಂಸ, ಹಂದಿ ಮಾಂಸಗಳನ್ನಾಗಲೀ ಬೇರೆ ಏನನ್ನಾಗಲೀ ಸಾರ್ವಜನಿಕವಾಗಿ ಅಥವಾ ಖಾಸಗಿಯಾಗಿ ಭಕ್ಷಣೆ ಮಾಡುವುದಕ್ಕೆ ಯಾರ ಅಡ್ಡಿ ಆತಂಕಗಳೂ ಇರಲಾರವು. ಆಹಾರ ಪದ್ಧತಿಯನ್ನೇ ಒಂದು ಇಶ್ಯೂ ಮಾಡಿ, ಸಸ್ಯಾಹಾರಿಗಳನ್ನು ಅನಾವಶ್ಯಕವಾಗಿ ಟೀಕಿಸಿ ಹುಯಿಲೆಬ್ಬಿಸುವ ನಿಮಗೆ ದೇವರು ಸದ್ಬುದ್ಧಿಯನ್ನು ಕೊಡಲಿ. ★

## ಮಿಥುನ ಮಾಸ ವಿಶೇಷ ದಿನಗಳು

| | |
|---|---|
| 15-06-2010 | ಮಿಥುನ ಸಂಕ್ರಮಣ |
| 21-06-2010 | ದಕ್ಷಿಣಾಯನಾರಂಭ<br>ಭಾಗೀರಥೀ ಜನ್ಮದಿನ |
| 22-06-2010 | ಸರ್ವೈಕಾದಶೀ<br>ಮಳೆ ನಕ್ಷತ್ರ ಆರ್ದ್ರಾ ಪ್ರಾರಂಭ |
| 23-06-2010 | ಪ್ರದೋಷಃ |
| 26-06-2010 | ಪೂರ್ಣಿಮಾ |
| 30-06-2010 | ಸಂಕಷ್ಟ ಚತುರ್ಥಿ |
| 07-07-2010 | ಮಳೆನಕ್ಷತ್ರ, ಪುನರ್ವಸು ಪ್ರಾರಂಭ, |
| 08-07-2010 | ಸರ್ವೈಕಾದಶೀ |
| 09-07-2010 | ಪ್ರದೋಷಃ |
| 11-07-2010 | ಅಮಾವಾಸ್ಯ |
| 16-07-2010 | ಕರ್ಕಾಟಕ ಸಂಕ್ರಮಣ |

PRAMOD
AUTOMOBILES
Ph : 2491723 (0)
2493633 (H.O.)
2212723 (R)
KARANGALPADY, MANGALORE - 575 003.
: Wholesale & Retail Dealers in :
2 & 3 WHEELERS SPARES & ACCESSORIES
Prop. : Ln.K. HARSHA KUMAR

ದೇವಿಕೃಪಾ ಏಜೆನ್ಸೀಸ್, ನಂದಿಕೂರು

ಫೋನ್ : 2556536 (R), 2555466 (0)
ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

## ಮಾಂಗಲ್ಯಂ ತಂತುನಾನೇನ ....

ಶ್ರೀಮತಿ ವತ್ಸಲಾ ಮತ್ತು ಶ್ರೀ ಬೋಳ ಅಚ್ಚುತ ರಾಯರ ಸುಪುತ್ರ **ಪ್ರೀತಮ್** ಹಾಗೂ ಶ್ರೀಮತಿ ಸುನೀತಾ ಮತ್ತು ಶ್ರೀ ರಾಜೇಂದ್ರಪ್ರಸಾದ್ ಕುಡುಪು ಇವರ ಪುತ್ರಿ **ರಮಿತ** ಇವರ ವಿವಾಹವು ತಾ.21-05-2010ರಂದು ಮಂಗಳೂರು ಶಕ್ತಿನಗರದ ಶ್ರೀ ಗೋಪಾಲಕೃಷ್ಣ ದೇವಾಲಯದ ಸುಧರ್ಮ ಸಭಾಭವನದಲ್ಲಿ ನೆರವೇರಿತು.

★★★★

ತಾಳೆಪ್ಪಾಡಿ ಭಾಗವತ ಗೋಪಾಲಕೃಷ್ಣರ ಪುತ್ರಿ **ನಮಿತಾ** ಹಾಗೂ ಶ್ರೀಮತಿ ಅನುರಾಧ ಮತ್ತು ದಿ। ಸುಬ್ರಾಯ ಜಿ. ಶ್ಯಾನುಭಾಗರ ಪುತ್ರ **ವೈಶಾಖ** ಇವರ ವಿವಾಹವು ತಾ.23-05-2010ರಂದು ಪುತ್ತೂರು ಮಹಾಲಿಂಗೇಶ್ವರ ಸಭಾಭವನದಲ್ಲಿ ನೆರವೇರಿತು.

★★★★

ಶ್ರೀಮತಿ ಪುಷ್ಪಾವತಿ ಮತ್ತು ಇನ್ನ ಶ್ರೀ ಶ್ರೀನಿವಾಸರಾವ್ ಇವರ ಪುತ್ರ **ಸಂದೀಪ್** ಹಾಗೂ ಶ್ರೀಮತಿ ಮಂಜುಳಾ ಮತ್ತು ಮೈಸೂರು ಶ್ರೀ ಶ್ರೀನಿವಾಸರವರ ಪುತ್ರಿ **ಭವ್ಯ** ಇವರ ವಿವಾಹವು ತಾ.27-05-2010ರಂದು ಮಂಗಳೂರು ಕದ್ರಿ ರಸ್ತೆಯಲ್ಲಿರುವ ಸಿ.ವಿ.ನಾಯಕ್ ಹಾಲ್‌ನಲ್ಲಿ ನೆರವೇರಿತು.

★★★★

ಪಾದೆಬೆಟ್ಟು ನವೀನಚಂದ್ರ ಮತ್ತು ಶ್ರೀಮತಿ ಅನ್ನಪೂರ್ಣ ಇವರ ಪುತ್ರಿ **ನವ್ಯತಾ** ಹಾಗೂ ಶ್ರೀಮತಿ ವಿದ್ಯಾ ಮತ್ತು ಶ್ರೀ ಪ್ರಕಾಶ್ ರಾವ್ ಇವರ ಪುತ್ರ **ಅನಿರುದ್ಧ** ಇವರ ವಿವಾಹವು ತಾ.28-05-2010ರಂದು ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

★★★★

ಶ್ರೀಮತಿ ಮತ್ತು ಶ್ರೀ ಎಸ್.ಡಿ.ಅನಂತ ರಾಜ ರಾವ್‌ರವರ ಪುತ್ರ **ವೇದವ್ಯಾಸ** ಹಾಗೂ ನಂದಳಿಕೆ ಶ್ರೀಮತಿ ಮತ್ತು ಶ್ರೀ ವೆಂಕಟಕೃಷ್ಣರಾವ್ ಇವರ ಪುತ್ರಿ **ರಂಜಿತಾ** ಇವರ ವಿವಾಹವು ತಾ.28-05-2010ರಂದು ಪುನರೂರು ಶ್ರೀ ವಿಶ್ವನಾಥ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ನೆರವೇರಿತು.

★★★★

ನೀಲಾವರ ಭಾಗವತ ಲಕ್ಷ್ಮೀನಾರಾಯಣ ರಾಯರ ಪೌತ್ರ ವ, ಶ್ರೀಮತಿ ಶಾರದಾ ಮತ್ತು ಶ್ರೀ ನೀಲಾವರ ನಾಗರಾಜರಾಯರ ಪುತ್ರ **ರಾಮಚಂದ್ರ**, ಹಾಗೂ ಕೀರ್ತಿಶೇಷ ಉದ್ಯಾವರ ಚಂದ್ರಶೇಖರ ರಾಯರ ಪುತ್ರಿ **ಚಿನ್ಮಯಿ** ಇವರ ವಿವಾಹವು ತಾ.06-06-2010ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

## ಗೃಹಪ್ರವೇಶ

ಶ್ರೀಮತಿ ಮತ್ತು ಶ್ರೀ ಎಸ್. ಭವಾನಿ ಶಂಕರ ರಾವ್ ಮಲ್ಲಮಾರು ಇವರು ಮಲ್ಲಮಾರಿನಲ್ಲಿ ನಿರ್ಮಿಸಿದ ನೂತನ ಗೃಹ 'ದುರ್ಗಾಕೃಪಾ'ದ ಪ್ರವೇಶೋತ್ಸವವನ್ನು ತಾ.04-04-2010ರಂದು ನೆರವೇರಿಸಿದರು.

★★★★

ಕಾವಳಕಟ್ಟೆ ಬಿ.ಸಿ.ರೋಡಿನಲ್ಲಿ ವಾಸ್ತವ್ಯವಿರುವ ಶ್ರೀ ಸಂತೋಷ ಶಂಕರ ನಾರಾಯಣ ರಾವ್ ಇವರು ಬಿ.ಸಿ.ರೋಡ್, ಗಾಂದೋಡಿಯಲ್ಲಿ ನಿರ್ಮಿಸಿದ ನೂತನ ಗೃಹ 'ಈಶಾವಾಸ್ಯಂ'ದ ಪ್ರವೇಶೋತ್ಸವವನ್ನು ತಾ.19-05-2010ರಂದು ನೆರವೇರಿಸಿದರು.

★★★★

ಉಡುಪಿ ಬೈಲಕೆರೆಯ ಶ್ರೀಮತಿ ಸಾಧನಾ ಮತ್ತು ಶ್ರೀ ಬಿ. ಜನಾರ್ಧನ್ ರಾವ್‌ರವರು ಬೈಲಕೆರೆಯಲ್ಲಿ ನಿರ್ಮಿಸಿದ ನೂತನ ಗೃಹ 'ಚೈತನ್ಯ'ದ ಪ್ರವೇಶೋತ್ಸವವನ್ನು ತಾ.23-05-2010 ರಂದು ನೆರವೇರಿಸಿದರು.

★★★★

ಶ್ರೀಮತಿ ರಾಜೇಶ್ವರಿ ಮತ್ತು ಶ್ರೀ ಕೃಷ್ಣಪ್ರಸಾದ್, ಕಿನ್ನಿಮುಲ್ಕಿ ಇವರು ಕಿನ್ನಿಮುಲ್ಕಿ ಬ್ರಹ್ಮಬೈದರ್ಕಳ ಗರೊಡಿಯ ಬಳಿ ನಿರ್ಮಿಸಿದ ನೂತನ ಗೃಹ 'ಪ್ರತ್ಯೂಷ್'ದ ಪ್ರವೇಶೋತ್ಸವವನ್ನು ತಾ.04-06-2010 ರಂದು ನೆರವೇರಿಸಿದರು.

★★★★

ಶ್ರೀಮತಿ ಶುಭ ಮತ್ತು ಶ್ರೀ ಚಂದ್ರಶೇಖರ್ ಇವರು ಉಡುಪಿ ಪುತ್ತೂರಿನ ಜಯದುರ್ಗಾ ನಗರದಲ್ಲಿ ನಿರ್ಮಿಸಿದ ನೂತನ ಗೃಹ 'ಶ್ರೀದುರ್ಗಾ'ದ ಪ್ರವೇಶೋತ್ಸವವನ್ನು ತಾ.25-05-2010 ರಂದು ನೆರವೇರಿಸಿದರು. ಮರುದಿನ ತಾ.26-5-2010ರಂದು ಇವರ ಪುತ್ರ **ಚಿ। ರಕ್ಷಿತ್**‌ನಿಗೆ ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ಬ್ರಹ್ಮೋಪದೇಶ ಜರಗಿತು.

## ಬ್ರಹ್ಮೋಪದೇಶ

### ಚಿ। ಶ್ರವಣ

ತಾ.16-5-2010ರಂದು ಶ್ರೀಮತಿ ಗೀತಾ ಮತ್ತು ಶ್ರೀಕರ ಇವರ ಪುತ್ರ ಚಿ। ಶ್ರವಣನಿಗೆ ಮಾಂಟ್ರಾಡಿಯ ಸ್ವಗೃಹದ ಸಮೀಪದ ಶ್ರೀ ಚಂದ್ರಮೌಳೀಶ್ವರ ದೇವಸ್ಥಾನದಲ್ಲಿ ಬ್ರಹ್ಮೋಪದೇಶ ಜರಗಿತು.

### ಚಿ। ಕಾರ್ತಿಕ

ತಾ.19-5-2010ರಂದು ಶ್ರೀಮತಿ ಸುಜಾತ ಮತ್ತು ಶ್ರೀ ನವೀನ್ ಕುಮಾರ್ ಇವರ ಪುತ್ರ ಚಿ। ಕಾರ್ತಿಕನಿಗೆ ಉಡುಪಿ ಕುಕ್ಕಿಕಟ್ಟೆಯಲ್ಲಿರುವ ಶ್ರೀ ಅನುಗ್ರಹ ಸಭಾಭವನದಲ್ಲಿ ಬ್ರಹ್ಮೋಪದೇಶ ಜರಗಿತು.

### ಚಿ। ಶ್ರೇಯಸ್

ತಾ.19-5-2010ರಂದು ಶ್ರೀಮತಿ ಪದ್ಮಜ ಮತ್ತು ಶ್ರೀ ಸತೀಶ ರಾವ್ ಇವರ ಪುತ್ರ ಚಿ। ಶ್ರೇಯಸ್‌ನಿಗೆ ಕೊಡವೂರು ಶ್ರೀ ಶಂಕರ ನಾರಾಯಣ ದೇವಸ್ಥಾನದ ವಸಂತ ಮಂಟಪದಲ್ಲಿ ಬ್ರಹ್ಮೋಪದೇಶ ಜರಗಿತು.

### ಚಿ। ಪ್ರತೀಕ್

ತಾ.23-5-2010ರಂದು ಶ್ರೀಮತಿ ವೇದಾವತಿ ಮತ್ತು ಶ್ರೀ ಐ. ಲಕ್ಷ್ಮೀಕಾಂತ ರಾವ್ ಇವರ ಪುತ್ರ ಪ್ರತೀಕನಿಗೆ ಇನ್ನ ಸಾಲ್ಡಾನ ಹೆರಿಟೇಜ್ ಹೋಂನಲ್ಲಿ ಬ್ರಹ್ಮೋಪದೇಶ ಜರಗಿತು.

### ಚಿ। ಸನತ್ ಕುಮಾರ್

ತಾ.23-5-2010ರಂದು ಶ್ರೀಮತಿ ಮತ್ತು ಶ್ರೀ ಪ್ರಕಾಶ ರಾವ್ ಇವರ ಪುತ್ರ ಚಿ। ಸನತ್ ಕುಮಾರನಿಗೆ ಚಿತ್ರಾಪುರ ಶ್ರೀ ದುರ್ಗಾಪರಮೇಶ್ವರಿ ದೇವರ ಸನ್ನಿಧಿಯಲ್ಲಿ ಬ್ರಹ್ಮೋಪದೇಶ ಜರಗಿತು.

### ಚಿ। ವಿಪುಲ್

ತಾ.23-5-2010ರಂದು ಉಡುಪಿಯಲ್ಲಿರುವ ಮುಂಡ್ಕೂರು ಪಾಲಚಂದ್ರರಾಯರ ಪೌತ್ರ, ಶ್ರೀಮತಿ ಗೀತಾ ಮತ್ತು ಯಂ.ಶೈಲೇಶ್‌ರಾವ್ ಇವರ ಪುತ್ರ ಚಿ। ವಿಪುಲನಿಗೆ ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ಬ್ರಹ್ಮೋಪದೇಶ ಜರಗಿತು.

### ಚಿ। ಸುಹಾಸ್

ತಾ.2-6-2010ರಂದು ಶ್ರೀಮತಿ ಸುಚೇತಾ ಮತ್ತು ಶ್ರೀ ಸುಧೀಶ ಇವರ ಪುತ್ರ ಚಿ। ಸುಹಾಸನಿಗೆ ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ಬ್ರಹ್ಮೋಪದೇಶ ಜರಗಿತು.

### ಚಿ। ಜಗನ್ಮಯ

ತಾ.2-6-2010ರಂದು ನಂದಳಿಕೆಯ ಶ್ರೀಮತಿ ಅನುರಾಧ ಮತ್ತು ಶ್ರೀ ಜಯಪ್ರಕಾಶ ರಾವ್ ಇವರ ಪುತ್ರ ಚಿ। ಜಗನ್ಮಯನಿಗೆ ನಂದಳಿಕೆಯ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಸಭಾಭವನದಲ್ಲಿ ಬ್ರಹ್ಮೋಪದೇಶ ಜರಗಿತು.

### ಚಿ। ವರುಣ್

ತಾ.3-6-2010ರಂದು ಶ್ರೀಮತಿ ವಾಣಿ ಮತ್ತು ಶ್ರೀ ವಾಸುದೇವ ರಾವ್ ಇವರ ಪುತ್ರ ಚಿ। ವರುಣನಿಗೆ ಉಡುಪಿ ರಥಬೀದಿಯ ಶ್ರೀ ರಾಘವೇಂದ್ರ ಮಠದ ಮಂತ್ರಾಲಯ ಸಭಾಮಂದಿರದಲ್ಲಿ ಬ್ರಹ್ಮೋಪದೇಶ ಜರಗಿತು.

### ಚಿ। ನಿನಾದ

ತಾ.3-6-2010ರಂದು ಶ್ರೀಮತಿ ಸಂಗೀತಾ ರಾವ್ ಮತ್ತು ಶ್ರೀ ರಮೇಶ ರಾವ್ ಇವರ ಪುತ್ರ ಚಿ। ನಿನಾದನಿಗೆ ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ಬ್ರಹ್ಮೋಪದೇಶ ಜರಗಿತು.

### ಚಿ। ನಿಖಿಲ್

ತಾ.4-6-2010ರಂದು ಕುಕ್ಕಿಕಟ್ಟೆ ಶ್ರೀಮತಿ ವನಿತಾ ಮತ್ತು ಶ್ರೀ ಪ್ರವೀಣ ಕುಮಾರ್ ಇವರ ಪುತ್ರ ಚಿ। ನಿಖಿಲ್‌ನಿಗೆ ಕುಕಿಕಟ್ಟೆಯ ಅನುಗ್ರಹ ಸಭಾಭವನದಲ್ಲಿ ಬ್ರಹ್ಮೋಪದೇಶ ಜರಗಿತು.

### ಚಿ। ನಚಿಕೇತ

ತಾ.14-6-2010ರಂದು ದಿ। ಹೆಜಮಾಡಿ ಚಂದ್ರಶೇಖರ ರಾಯರ ಪೌತ್ರ, ಶ್ರೀಮತಿ ನೀತಾ ಮತ್ತು ಶ್ರೀ ಎಚ್. ದಿನೇಶ ರಾವ್ ಇವರ ಪುತ್ರ ಚಿ। ನಚಿಕೇತನಿಗೆ ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ಬ್ರಹ್ಮೋಪದೇಶ ಜರಗಿತು.

# ತುಳುನಾಡಿನಲ್ಲಿ ಬ್ರಾಹ್ಮಣ್ಯ

**ದಿ। ಪ್ರೊ। ಗುರುರಾಜ ಭಟ್ಟರ ಕೃತಿಯಿಂದ ಸಂಗ್ರಹಿಸಿದ ಭಾಗ**
**ಸಂಗ್ರಹ : ಸಿ.ಎಸ್.ರಾವ್.**

(ಹಿಂದಿನ ಸಂಚಿಕೆಯಿಂದ)


ಶಂಕರಗಂಡನಾಗಲೀ ಲೋಕಾದಿತ್ಯನಾಗಲೀ ಅವರ ತಂದೆಯಾದ ಬಂಕೆಯರಸನು ತೀರಿ ಹೋಗುವಾಗ ಚಿಕ್ಕವರಿರ ಬೇಕು. ಆದುದರಿಂದಲೇ ಬಂಕೆಯರಸನ ಮರಣಾನಂತರ ಇಂದ್ರನೆಂಬವನನ್ನು ತಾತ್ಕಾಲಿಕ ವಾಗಿ ಗವರ್ನರನನ್ನಾಗಿ ನೇಮಿಸಿರಬೇಕು. (ಬಂಕೆಯರಸ-ಇಂದ್ರ-ಶಂಕರಗಂಡ-ಲೋಕಾದಿತ್ಯ).

5) ಇನ್ನು ವಸು ಚಕ್ರವರ್ತಿ ವಿಚಾರ: ಸಹ್ಯಾದ್ರಿಯಲ್ಲಿ ಈತನು ಕದಂಬ ವೃಕ್ಷದ ಬುಡದಲ್ಲಿ ಪಾರ್ವತಿ ಪರಮೇಶ್ವರರಿಗೆ ಹುಟ್ಟಿದ ಕದಂಬನ ಮಗನೆಂದಿದೆ. ಚರಿತ್ರೆಯ ಪುಟಗಳನ್ನು ಮಗುಚಿದರೆ ಇವನಾರೆಂದು ತಿಳಿದು ಬರುವುದಿಲ್ಲ. ನಮ್ಮ ನಾಡಿನಲ್ಲಿ ಅಂಥ ಅರಸನಿದ್ದರೆ ಅವನು ಆಳುಪರ ಕುಲಕ್ಕೆ ಸೇರಿದ ಕ್ರಿ.ಶ.1236ರಿಂದ 1254ರ ವರೆಗೆ ತುಳುವದಲ್ಲಿ ಅಧಿಕಾರದಲ್ಲಿದ್ದ ವಿಬುಧವಸು ಎಂಬ ಚಕ್ರವರ್ತಿಯಾಗಿರ ಬಹುದೋ ಎಂದು ನನಗನಿಸುತ್ತದೆ. ಆದರೆ ಈ ವಿಬುಧವಸುವಿಗೂ ಕದಂಬ ಕುಲಕ್ಕೂ ಯಾವ ಸಂಬಂಧವೂ ಕಾಣುವುದಿಲ್ಲ.

6) ತಲಗುಂದ ಶಾಸನದ ಪ್ರಕಾರ (ಕ್ರಿ.ಶ.450) ತಿಳಿದು ಬರುವ ವಿಷಯವೆಂದರೆ ಮಯೂರ ವರ್ಮನು, ತುಳು ಗ್ರಾಮ ಪದ್ಧತಿ ಪ್ರತಿಪಾದಿಸುವಂತೆ ಜೈನನಲ್ಲವೆಂಬುದು ಆತನು ಬ್ರಾಹ್ಮಣ ಕುಲಕ್ಕೆ ಸೇರಿದವನೆಂಬುದೂ ಆಗಿದೆ. ಮಾತ್ರವಲ್ಲದೆ ಈ ದಾಖಲೆ ಪ್ರಕಾರ ಗ್ರಾಮಗಳನ್ನು ಬ್ರಾಹ್ಮಣರಿಗೆ ಹಂಚಿದ್ದಾಗಲೀ, ಅವರನ್ನು ಆಮಂತ್ರಿಸಿದ್ದಾದುದರ ಉಲ್ಲೇಖವಾಗಲಿ ಕಂಡು ಬರುವುದಿಲ್ಲ. ಆದುದರಿಂದ ಕ್ರಿ.ಶ.5ನೇ ಶತಮಾನದ ಮಧ್ಯಕಾಲದ ವರೆಗೆ ಮಯೂರವರ್ಮನ ಕುರಿತಾದ ಪುರಾಣ ಕತೆಯು ಬಳಕೆಗೆ ಬಂದಿಲ್ಲ. ಹನ್ನೆರಡನೆಯ ಶತಮಾನದ ಶಾಸನ ಒಂದು ಈ ಪುರಾಣದ ಪ್ರಾರಂಭಿಕ ನೆಲೆಯನ್ನು ತಿಳಿಸುವಂತಿದೆ. ಸಾಮಂತನಾದ ಸೋಯಿದೇವನಿಗೆ ಸಂಬಂಧಿಸಿದ ಕ್ರಿ.ಶ.1160ರ ಶಾಸನವು ಈ ಕೆಳಗಿನ ದಾಖಲೆಯನ್ನು ಒಳಗೊಂಡಿದೆ.

(ಮುಂದುವರಿಯುವುದು)

# ವೈದ್ಯೋ ನಾರಾಯಣೋ ಹರಿ: ಶ್ರೀಸಾಮಾನ್ಯ ಮಹಾನುಭಾವರಾದ ಹಳೆಯಂಗಡಿ ಸುಬ್ರಾಯ (ಹರಿ) ಭಟ್ಟರ ವ್ಯಕ್ತಿ ಪರಿಚಯ



ಹಳೆಯಂಗಡಿಯ ಈ ಆಯುರ್ವೇದ ಪಂಡಿತರು, ಅಪ್ಪಿಭಟ್ಟರೆಂದೂ, ಅಪ್ಪಿಯಣ್ಣನೆಂದೂ, ಮಾಯನೆಂದೂ, ಹರಿಭಟ್ಟರೆಂದೂ ಪ್ರಖ್ಯಾತರಾಗಿ, ಸೋಮಾರಿಗಳ ಟಿ.ವಿ. ಇಲ್ಲದ, ದೂರವಾಣಿ ಇಲ್ಲದ, ಸರಳ ಸಂಪ್ರದಾಯದ ಮನೆಯಲ್ಲಿ ಆರೋಗ್ಯಕರವಾದ ದೇಹ, ಪುಟಿಯುವ ಉಲ್ಲಾಸ ಉತ್ಸಾಹಗಳ ಮನಸ್ಸಿನೊಂದಿಗೆ, ಕಾವಿಯ ಖಾದಿ ತುಂಡು ವಸ್ತ್ರದಲ್ಲಿ, ಎಂಬತ್ತನಾಲ್ಕು ವರ್ಷಗಳ ತಮ್ಮ ತುಂಬು ಬಾಳಿನಲ್ಲಿ ಆಸುಪಾಸಿನ ಮತ್ತು ಊರ-ಪರವೂರಿನ ಸಾವಿರಾರು ಜನರ ರೋಗ ಶುಶ್ರೂಷೆ ಮಾಡಿ, ಅವರ ಬಾಳಿಗೆ ಚೈತನ್ಯದ ಸೆಲೆಯಾಗಿ ಬೆಳಕನ್ನು ತುಂಬಿದ್ದವರು.

ಅವರದು ಅಸಾಧಾರಣವಾದ ವ್ಯಕ್ತಿತ್ವ. ಅವರಿಗೆ ಎಲ್ಲರೂ ಆಪ್ತರೇ, ಗೆಳೆಯರೇ. ಯಾವನೂ ಶತ್ರುವಿರಲಿಲ್ಲ. ಅವರ ಹೃದಯ ನಿರ್ಮಲವೂ ವಿಶಾಲವೂ ಆಗಿತ್ತು. ಅದುದರಿಂದಲೇ ಅವರಲ್ಲಿ ಶ್ರದ್ಧೆ ಇತ್ತು. ಯಾವತ್ತೂ ಅವರು ಭಗವಂತನಲ್ಲಿ ಶ್ರದ್ಧೆ ಇರಿಸಿ ಚಿಕಿತ್ಸೆ ನೀಡುತ್ತಿದ್ದರು, ಹಾಗಾಗಿ ಅವರ ಬಳಿ ಬಂದವರಿಗೆ ಔಷಧ ಮತ್ತು ಅವರ ಮಾತು ಫಲಿಸುತ್ತಿತ್ತು, ಪವಾಡವನ್ನೇ ಮಾಡುತ್ತಿತ್ತು. ನಡೆ, ನುಡಿಯಲ್ಲಿ ತೀರಾ ಸರಳ ಶೈಲಿಯ, ಪ್ರಾಮಾಣಿಕ, ಉದಾತ್ತ ಹಾಗೂ ಉದಾರ ಚಿಂತನದ ಅವರು ಜಾತಿ, ಮತ, ಪಂಥ ಭೇದವಿಲ್ಲದೆ, ಎಲ್ಲಾ ವರ್ಗದವರನ್ನೂ ಸಮಾನವಾಗಿ ಕಾಣುತ್ತಿದ್ದರು. ಹೀಗೆ ಅವರಿಂದ ಉಪಕೃತರಾದವರ ಸಂಖ್ಯೆ ಅನಂತ. ಅವರು ನೀಡುವ ಔಷಧವಾಗಲೀ, ಜಾತಕದ ಪರಿಹಾರವಾಗಲೀ ರೋಗಿಗಳಿಗೆ ಏನೊಂದೂ ಭಾರವಾಗುತ್ತಿರಲಿಲ್ಲ. ತನಗೆ ದೈವದತ್ತವಾಗಿ ಬಂದ ಚಿನ್ನದ ಮೊಟ್ಟೆ ಇಡುವ ವಿದ್ಯೆಗಳಾದ ವೈದ್ಯವೃತ್ತಿ, ಜ್ಯೋತಿಷ್ಯ, ನೀರಿರುವ ಜಾಗದ ಅರಿವು, ಅರಶಿನ ಕಾಯಿಲೆ, ಬಂಜೆತನದ ಪರಿಹಾರದ ಚಿಕಿತ್ಸೆ ಮೊದಲಾದವೆಲ್ಲವನ್ನೂ ನಿ:ಸ್ವಾರ್ಥ ಬುದ್ಧಿಯಿಂದ ಕೇವಲ ಆರ್ತರ ಸೇವೆಗಾಗಿಯೇ ಮುಡಿಪಾಗಿಟ್ಟಿದ್ದರು.

ಇಂತಹ ವ್ಯಕ್ತಿತ್ವದ ಶ್ರೀ ಸುಬ್ರಾಯ ಭಟ್ಟರ ಕುರಿತು ಅವರ ಸುಪುತ್ರ ಶ್ರೀ ಶಿವಚಂದ್ರ ಭಟ್ಟರು, ಪ್ರಾರಂಭದಲ್ಲಿ ಬರೆದು ತಿಳಿಸಿದ ಗೀತಾ ಶ್ಲೋಕದಂತೆ ಬದುಕಿದ್ದ ತಮ್ಮ ತೀರ್ಥರೂಪರ ಹಲವಾರು ಚಿಕಿತ್ಸಾ ವಿಧಾನಗಳನ್ನು, ಜೀವನ ದರ್ಶನಗಳನ್ನೊಳಗೊಂಡ "ವೈದ್ಯೋ ನಾರಾಯಣೋ ಹರಿ:" ಎಂಬ ಕಿರು ಹೊತ್ತಗೆಯನ್ನು ಬರೆದಿದ್ದಾರೆ. ಇದರಲ್ಲಿ ಅವರ ಕುರಿತಾದ ಸಮಗ್ರ ವಿಷಯಗಳನ್ನು ಚೊಕ್ಕದಾಗಿ ದಾಖಲಿಸಿದ್ದಾರೆ. ಈ ಕೃತಿ ಅವರ ಜೀವನ ದರ್ಶನಕ್ಕೆ ಹಿಡಿದ ಕೈಗನ್ನಡಿ ಎಂದು ನಿ:ಸಂಶಯವಾಗಿ ಹೇಳಬಹುದು. "ಕಲಿತಾದ ಮೇಲೆ ಅಧ್ಯಾಪಕ, ರೋಗ ವಾಸಿಯಾದ ಮೇಲೆ ವೈದ್ಯ" ನಡೆಯದ ನಾಣ್ಯಗಳೆಂಬ ನುಡಿ ಈ ವೈದ್ಯರ ಬಗ್ಗೆ ಸಲ್ಲುವುದಿಲ್ಲ.

ಇಂತಹ ಪರಮಹಂಸ, ಕಣ್ಣ ಮುಂದೆ ಇದ್ದರೂ, ಜತೆ ಇದ್ದರೂ, ಅವರ ಸತ್ಸಂಗದಿಂದ ನಮ್ಮನ್ನು ಸಾರ್ಥಕಗೊಳಿಸಿಲ್ಲವಲ್ಲ ಎಂದು ನನ್ನಂತಹವರಿಗೆ ಖೇದವಾಗುತ್ತದೆ. ಶತಮಾನಗಳಿಗೊಮ್ಮೆ ಅವತರಿಸುವ ಇಂತಹ ವಿಭೂತಿ ಪುರುಷರ ನೆನಪು ನಮ್ಮ ಬಾಳಿಗೆ ಬೆಳಕು ಬೀರುತ್ತಿರಲಿ.

ನಿರೂಪಕರು: ಯಚ್. ಶಿವಚಂದ್ರ ಭಟ್, ಹಳೆಯಂಗಡಿ, ಪ್ರಕಾಶಕರು: ಶ್ರೀ ಹರಿವಂಶ ಪ್ರತಿಷ್ಠಾನಂ, ಹಳೆಯಂಗಡಿ, ಮಂಗಳೂರು

ಬಹುಜನಂ ಕೈಮುಗಿದ ತೀರ್ಥದೊಳ್ ಕ್ಷೇತ್ರದೊಳ್ ।
ಮಹಿಮೆಯಲ್ಲೇನೆಂದು ಸಂಶಯಿಸಬೇಡ ॥
ವಿಹಿತಗೈದವರಾರು ವಸತಿಯಂ ದೈವಕ್ಕೆ? ।
ಮಹಿಮೆ ಮನಸೋತೆಡೆಯೊ – ಮಂಕುತಿಮ್ಮ ॥

## ಶುಭ ಜನನ

ಡಾ। ರಾಘವರಾವ್, ಸುಮತಿ ರಾವ್‌ರ ಮಗ ಡಾ। ಸಂದೀಪ್‌ರಾವ್ ಮತ್ತು ಶ್ರೀಮತಿ ಹರ್ಷಿತಾ ರಾವ್ (ಕಬಕ ಸತೀಶ್ ರಾವ್ ಮತ್ತು ವೇದವಲ್ಲಿ ಇವರ ಮಗಳು) ಇವರಿಗೆ ಏಪ್ರಿಲ್ 1ರಂದು ಗಂಡು ಮಗು (ತನಿಷ್) ಜನನ.

## ಅಂತರ್‌ರಾಷ್ಟ್ರೀಯ ಕರಾಟೆ ಸ್ಪರ್ಧೆಯಲ್ಲಿ ಶಮಾಶರತ್



ಚಿತ್ರಕಲೆ, ನೃತ್ಯ, ಸಂಗೀತದಂತಹ ಲಲಿತ ಕಲೆಗಳ ಅಭ್ಯಾಸದಲ್ಲಿ ಕೈಯಾಡಿಸಿರುವ ಕುಶಲ ಕಲಾವಿದೆ ಶಮಾಶರತ್, ಕಷ್ಟಸಾಧ್ಯ ಪುರುಷ ಸೀಮಿತ ಕರಾಟೆಯಂಥ ಕಲೆಯಲ್ಲೂ ಉತ್ತಮ ಸಾಧನೆ ಮಾಡಿದ್ದಾಳೆ.

1999 ಡಿಸೆಂಬರ್‌ನಲ್ಲಿ ಜನಿಸಿದ ಶಮಾಶರತ್, ಶ್ರೀ ಶರತ್‌ಕುಮಾರ್ ಶುಂಠಿಪಾಡಿ ಮತ್ತು ಶ್ರೀಮತಿ ಪರಮೇಶ್ವರಿಯವರ ಸುಪುತ್ರಿ. ಈಕೆ ಬೆಂಗಳೂರಿನ ಪದ್ಮನಾಭ ನಗರದ ಕಾರ್ಮೇಲ್‌ಸ್ಕೂಲಿನ 5ನೇ ತರಗತಿಯ ವಿದ್ಯಾರ್ಥಿನಿ.

ಕರಾಟೆಯಲ್ಲಿ ಬ್ಲಾಕ್‌ಬೆಲ್ಟ್ 3ನೇ ಡಿಗ್ರಿ ಪಡೆದಿರುವ ಈಕೆ 18-4-2010ರಂದು ಶ್ರೀಲಂಕಾದ ಕ್ಯಾಂಡಿಯಲ್ಲಿನ ಯುನಿವರ್ಸಿಟಿ ಆಫ್ ಪೆರೆಡೆನಿಯಾದ ಅಂಗಣದಲ್ಲಿ ನಡೆದ 8ನೇ ಅಂತರ್‌ರಾಷ್ಟ್ರೀಯ ಕರಾಟೆ ಚಾಂಪಿಯನ್ ಶಿಪ್‌ನಲ್ಲಿ ಭಾಗವಹಿಸಿ ಕುಮಿತೆ ವಿಭಾಗದಲ್ಲಿ ಪ್ರಥಮ ಬಹುಮಾನವನ್ನು, 'ಕಟಾ' ವಿಭಾಗದಲ್ಲಿ ದ್ವಿತೀಯ ಬಹುಮಾನವನ್ನು ಪಡೆಯುವ ಮೂಲಕ ಜಪಾನ್‌ನ ನಾಹಸಿಟಿಯಲ್ಲಿ ನಡೆಯಲಿರುವ, ಜೂನ್ 2010 ವರ್ಲ್ಡ್ ಕರಾಟೆ ಚಾಂಪಿಯನ್‌ಶಿಪ್‌ನಲ್ಲಿ ಭಾಗವಹಿಸಲಿದ್ದಾಳೆ. ಕರಾಟೆಯಲ್ಲಿ ಈವರೆಗೆ ಇವಳು ಐದು ರಾಜ್ಯ ಮಟ್ಟದ ಪಂದ್ಯಗಳಲ್ಲಿ ಪ್ರಶಸ್ತಿಗಳನ್ನು, ಏಳು ರಾಷ್ಟ್ರಮಟ್ಟದ ಪಂದ್ಯಗಳಲ್ಲಿ ಬಹುಮಾನಗಳನ್ನು ಪಡೆದುಕೊಂಡಿದ್ದಾಳೆ.

ಚಿತ್ರಕಲೆಯಲ್ಲೂ ಹಲವಾರು ಬಹುಮಾನಗಳನ್ನು ಗಳಿಸುವುದರೊಂದಿಗೆ 2009ರ ಮಕ್ಕಳ ದಿನಾಚರಣೆ ಅಂಗವಾಗಿ ಕೇಂದ್ರ ಸರಕಾರದ ''ರಾಷ್ಟ್ರೀಯ ಪ್ರತಿಭಾ ಪುರಸ್ಕಾರ''ಕ್ಕಾಗಿ ಕರ್ನಾಟಕ ಸರ್ಕಾರದ ಮಕ್ಕಳ ಮತ್ತು ಅಭಿವೃದ್ಧಿ ಇಲಾಖೆಯ ಆಯ್ಕೆ ಪ್ರಕ್ರಿಯೆಯಲ್ಲಿ ''ಕಲಾ ವಿಭಾಗದ ಅಸಾಧಾರಣ ಪ್ರತಿಭೆ'' ಎಂದು ಆಯ್ಕೆಯಾಗಿ ರೂ.10,000/- ಮತ್ತು ಪ್ರಶಸ್ತಿ ಪತ್ರಗಳನ್ನು ಪಡೆದಿದ್ದಾಳೆ. ಶಮಾಶರತ್ ಇವಳ ವಿಶಿಷ್ಟ ಸಾಧನೆಗಾಗಿ ಶ್ರೀಶಾರದಾ ಬಳಗದ ಅಭಿನಂದನೆಗಳು.

### ಕು| ಮೇಘನ ಜೋಷಿ

2009-10ನೇ ಸಾಲಿನ ಕರ್ನಾಟಕ ಪ್ರೌಢಶಿಕ್ಷಣ ಮಂಡಳಿ ನಡೆಸಿದ ಎಸ್‌ಎಸ್‌ಎಲ್‌ಸಿ. ಪರೀಕ್ಷೆಯಲ್ಲಿ ಪುತ್ತೂರು ವಿವೇಕಾನಂದ ಆಂಗ್ಲ ಮಾಧ್ಯಮ ಶಾಲಾ ವಿದ್ಯಾರ್ಥಿನಿ ಕು| ಮೇಘನ ಜೋಷಿ 599 ಅಂಕ (96%) ಗಳಿಸಿರುತ್ತಾಳೆ. ಈಕೆ ಪುತ್ತೂರು ಬಪ್ಪುಗೆ ಗಣೇಶ ಜೋಷಿ, ಚಾರ್ಟರ್ಡ್ ಅಕೌಂಟೆಂಟ್ ಮತ್ತು ಶ್ರೀಮತಿ ವೀಣಾ ಕಡಬ ಇವರ ಸುಪುತ್ರಿ. ಇವಳಿಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.

## ನಿಧನ

### ಸುಲೋಚನ ರಾವ್

ಎರ್ಮಾಳಿನ ನಿವೃತ್ತ ಮುಖ್ಯೋಪಾಧ್ಯಾಯ ದಿ| ವೈ. ಭುಜಂಗರಾವ್ ಇವರ ಪತ್ನಿ ಸುಲೋಚನ ರಾವ್ (75 ವರ್ಷ) ಇವರು ತಾ.4-6-2010 ರಂದು ದೈವಾಧೀನರಾಗಿರುತ್ತಾರೆ. ಇವರು ಇಬ್ಬರು ಪುತ್ರರು ಹಾಗೂ ಮೂವರು ಪುತ್ರಿಯರು ಮತ್ತು ಅಪಾರ ಬಂಧುಬಳಗವನ್ನು ಅಗಲಿದ್ದಾರೆ.

## ಅಭಿನಂದನೆ



### ಆದರ್ಶ ಕೆ. ಕೆ.

ಕಾರ್ಕಳ ಪ್ರಧಾನ ಅಂಚೆ ಕಛೇರಿಯ ಉದ್ಯೋಗಿ ಕೇಶವ ರಾವ್ ಮತ್ತು ಶ್ರೀಮತಿ ರಾಜೇಶ್ವರಿ ಕೆ. ಇವರ ಪುತ್ರ ಆದರ್ಶ ಕೆ.ಕೆ. ಈ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ (ಶೇ.95.52) 597 ಅಂಕಗಳನ್ನು ಪಡೆದಿದ್ದಾನೆ. ಇವನು ವಿಜ್ಞಾನ ವಿಷಯದಲ್ಲಿ 99 ಅಂಕಗಳನ್ನು ಮತ್ತು ಸಂಸ್ಕೃತ ವಿಷಯದಲ್ಲಿ 124 ಅಂಕಗಳನ್ನು ಪಡೆದಿರುತ್ತಾನೆ. ಇವನು ಕಾರ್ಕಳದ ಶ್ರೀಮದ್ ಭುವನೇಂದ್ರ ಪ್ರೌಢಶಾಲೆಯ ವಿದ್ಯಾರ್ಥಿ. ಆದರ್ಶ ಕೆ.ಕೆ. ಇವನಿಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.



### ಕು| ಪವಿತ್ರ ವೈ.

2009-10ನೇ ಸಾಲಿನ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ಉಡುಪಿ ಪೂರ್ಣಪ್ರಜ್ಞ ಕಾಲೇಜಿನ ವಿದ್ಯಾರ್ಥಿನಿ ಕು| ವೈ. ಪವಿತ್ರ ಪಿ.ಸಿ.ಎಮ್.ಬಿ.ನಲ್ಲಿ 543 ಅಂಕ ಗಳಿಸಿರುತ್ತಾಳೆ. ಪಿ.ಸಿ.ಎಮ್.ನಲ್ಲಿ ಶೇ.96 ಅಂಕ ಪಡೆದಿರುತ್ತಾಳೆ. ಈಕೆ ಉಡುಪಿ ಕುಕ್ಕಿಕಟ್ಟೆಯಲ್ಲಿ ವಾಸ್ತವ್ಯವಿರುವ ಎಲ್ಲೂರು ಪ್ರಕಾಶ ಕುಮಾರ್, ಇಂಜಿನಿಯರ್ ಮತ್ತು ಶ್ರೀಮತಿ ಗಾಯತ್ರಿ ಕಡಬ ಇವರ ಪುತ್ರಿ. ಈಕೆ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ.92.32 ಅಂಕಗಳಿಸಿದ್ದಳು. ವೈ. ಪವಿತ್ರಳಿಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.



### ಕು| ಶ್ರೀಪ್ರಧಾ ಕೆ.

2009-10ನೇ ಸಾಲಿನ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ಶ್ರೀಪ್ರಧಾ ಕೆ. 573 ಅಂಕಗಳನ್ನು ಗಳಿಸಿದ್ದು ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆ ಹೊಂದಿರುತ್ತಾಳೆ. ಈಕೆ ಕುಳಾಯಿಯಲ್ಲಿ ವಾಸ್ತವ್ಯವಿರುವ ಶ್ರೀಸತ್ಯನಾರಾಯಣ ಕೆ. ಇವರ ಪುತ್ರಿ. ಶ್ರೀಪ್ರಧಾ ಕೆ. ಇವಳಿಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.



### ಚಿ| ಕೃತ್ತಿವಾಸ

2009-10ನೇ ಸಾಲಿನ ಎಸ್.ಎಸ್.ಎಲ್.ಸಿ. ಪಬ್ಲಿಕ್ ಪರೀಕ್ಷೆಯಲ್ಲಿ ಚಿ| ಕೃತ್ತಿವಾಸ 540 ಅಂಕ ಗಳಿಸಿರುತ್ತಾನೆ (86.40%). ಇವನು ಮೂಡಬಿದ್ರೆಯಲ್ಲಿ ವಾಸ್ತವ್ಯವಿರುವ ಉದ್ಯಮಿ ಮೂಡಸರಿಗೆ ಜಗದೀಶ ರಾವ್ ಮತ್ತು ಶ್ರೀಮತಿ ವೃಂದ ಇವರ ಪುತ್ರ. ಇವನು ಯೋಗಾಸನ ಹಾಗೂ ಇತರ ಹಲವಾರು ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನಗಳನ್ನು ಗಳಿಸಿ ಕೀರ್ತಿ ತಂದಿರುತ್ತಾನೆ. ಚಿ| ಕೃತ್ತಿವಾಸನಿಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.

## ನಿಧನ

### ಬೈಲೂರು ವನಜಾಕ್ಷಿ ಅಮ್ಮ

ದಿ| ಸದಾಶಿವರಾಯರ ಧರ್ಮಪತ್ನಿ ಬೈಲೂರು ವನಜಾಕ್ಷಿ ಅಮ್ಮನವರು ಅಲ್ಪಕಾಲದ ಅಸೌಖ್ಯದಿಂದ 78ನೇ ವಯಸ್ಸಿನಲ್ಲಿ ನಿಧನ ಹೊಂದಿದರು. ಸ್ಥಾನಿಕ ಸಮಾಜದಲ್ಲಿ ಓರ್ವ ದಿಟ್ಟ ಮಹಿಳೆ ಎಂಬ ಕೀರ್ತಿಗೆ ಪಾತ್ರರಾಗಿದ್ದ ಮೃತರು ತಮ್ಮ ಪತಿಯ ನಿಧನದ ನಂತರ ಪತಿಯು ನಡೆಸಿಕೊಂಡು ಬರುತ್ತಿದ್ದ ಹೊಟೇಲ್ ಉದ್ಯಮವನ್ನು ಇತ್ತೀಚಿನ ವರೆಗೂ ಮುನ್ನಡೆಸಿಕೊಂಡು ಬಂದಿದ್ದರು. ಬೈಲೂರಿನ ಸ್ವಗೃಹದಲ್ಲಿ ಪಶುಪಾಲನೆ ಮೂಲಕ ಹಾಲು ಉತ್ಪಾದನೆ ಮತ್ತು ಹಾಲಿನ ಡೈರಿಯನ್ನು ಸ್ವತಃ ನಡೆಸಿಕೊಂಡು, ತಮ್ಮ ಮಕ್ಕಳು ಹಾಗೂ ಇತರ ಕೆಲಸಗಾರರ ಸಹಾಯದಿಂದ ಸೈಕಲ್ ರಿಕ್ಷಾಗಳಲ್ಲಿ ಮನೆ ಮನೆಗೆ ಹಾಗೂ ದೂರದ ಊರುಗಳಿಗೆ ಹಾಲಿನ ಸರಬರಾಜು ಮಾಡುತ್ತಿದ್ದುದು ಬಹಳ ಸಾಹಸದ ಕೆಲಸ. ದನಗಳ ಕೊಳ್ಳುವಿಕೆ, ಮಾರುವಿಕೆ ಮೂಲಕ ಉಡುಪಿ ಆಸುಪಾಸಿನಲ್ಲಿ ಮಾತ್ರವಲ್ಲ ದೂರದ ಆಗುಂಬೆ, ಶಿವಮೊಗ್ಗದಿಂದಲೂ ವ್ಯಾಪಾರಿಗಳು ಇವರಲ್ಲಿ ಬಂದು ವ್ಯವಹಾರ ನಡೆಸುತ್ತಿದ್ದರು. ಇವರ ಶ್ರಮಭರಿತ ಜೀವನ ಹಾಗೂ ವ್ಯವಹಾರದಲ್ಲಿ ದಿಟ್ಟತನವನ್ನು ಗುರುತಿಸಿದ ಅನೇಕ ಸಂಘ ಸಂಸ್ಥೆಗಳು ಇವರನ್ನು ಸನ್ಮಾನಿಸಿ ಗೌರವಿಸಿದೆ. ಉಡುಪಿ ಜಿಲ್ಲೆಯ ಪಶು ಸಂಗೋಪನಾ ಇಲಾಖೆ, ಉಡುಪಿ ಡೈರಿ ಒಕ್ಕೂಟ ಹಾಗೂ ಅನೇಕ ಮಹಿಳಾ ಸಂಘಟನೆಗಳು ಇವರನ್ನು ಸನ್ಮಾನಿಸಿದೆ. ಮೃತ ಬೈಲೂರು ವನಜಾಕ್ಷಮ್ಮನವರು ನಾಲ್ವರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

### ಹರೀಶ್ ಶಾಸ್ತ್ರಿ ಧಾರವಾಡ

ಮೂಲತಃ ಪುತ್ತೂರಿನವರಾದ ದಿ| ರಾಜಾರಾಂ ಶಾಸ್ತ್ರಿ ಹಾಗೂ ಶ್ರೀಮತಿ ಪ್ರೇಮಾ ಶಾಸ್ತ್ರಿಗಳ ಏಕಮಾತ್ರ ಪುತ್ರ ಹರೀಶ್ ಶಾಸ್ತ್ರಿಯವರು ಧಾರವಾಡದಲ್ಲಿರುವ ಸ್ವಗೃಹದಲ್ಲಿ ತಾ.7-6-2010 ರಂದು ಅಲ್ಪಕಾಲದ ಅಸೌಖ್ಯದಿಂದ ತಮ್ಮ 43ನೇ ವರ್ಷ ಪ್ರಾಯದಲ್ಲಿ ನಿಧನ ಹೊಂದಿರುತ್ತಾರೆ. ಹರೀಶ್ ಶಾಸ್ತ್ರಿಯವರು ಖಾಸಗಿ ಶಿಕ್ಷಣ ಸಂಸ್ಥೆಯಲ್ಲಿ ಉದ್ಯೋಗಿಯಾಗಿದ್ದು, ತಾಯಿ ಪ್ರೇಮಾ ಶಾಸ್ತ್ರಿ, ಪತ್ನಿ ಗೀತಾ ಶಾಸ್ತ್ರಿ, ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

## ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ

**ಪ್ರಶ್ನೆ: ಬೊಜ್ಜು ಎಂದರೇನು? ಬೊಜ್ಜು ಇಳಿಸುವುದು ಹೇಗೆ?** **ಡಾ| ವೈ. ಸುದರ್ಶನ ರಾವ್**

**ಉತ್ತರ :** ದೇಹದ ತೂಕವು ವಯಸ್ಸು, ಲಿಂಗ, ಎತ್ತರಕ್ಕನುಗುಣವಾಗಿ ಇರಬೇಕಾದ ಅನುಪಾತದ ಶೇಕಡಾ 20ಕ್ಕಿಂತಲೂ ಹೆಚ್ಚಿದ್ದರೆ ಅದನ್ನು ಬೊಜ್ಜುತನವೆಂದು ಕರೆಯುವರು. ದೇಹದ ಎತ್ತರಕ್ಕೆ ಹೊಂದಿಕೆಯಾಗದ ಅಗಲ, ಮುಂಚಾಚಿದ ಹೊಟ್ಟೆ, ದಪ್ಪಗಿರುವ ತೋಳು, ತೊಡೆ, ನಿತಂಬಗಳು ಹಾಗೂ ಹೊಟ್ಟೆಯ ಎಡ ಮತ್ತು ಬಲ ಭಾಗದಲ್ಲಿ ಜೋತು ಬಿದ್ದಿರುವ ಕೊಬ್ಬಿನ ಪದರಗಳನ್ನು ಕಂಡರೆ ಬೊಜ್ಜು ಇದೆ ಎಂದು ಊಹಿಸಬಹುದು.

ಬೊಜ್ಜುತನವು ಇತರರಿಂದ ತನ್ನನ್ನು ಅಪಹಾಸ್ಯ ಮಾಡಿಸಿಕೊಳ್ಳುವ, ಸಹಾನುಭೂತಿ ಕಿಂಚಿತ್ತೂ ಸಿಗದ, ಅಂತರ್ಮುಖಿಯನ್ನಾಗಿಸುವ ಕಾಯಿಲೆ. ತಮ್ಮ ದೇಹದ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವುದು ಬೊಜ್ಜು ಇರುವವರ ಮುಖ್ಯ ಸಮಸ್ಯೆ. ಹಾಗಾಗಿ ಮೈಮೇಲೆ ಅಲ್ಲಲ್ಲಿ ಕಜ್ಜಿ, ನಂಜು ತುರಿಕೆಗಳು ಅವರಲ್ಲಿ ಸಾಮಾನ್ಯ. ಎಲುಬಿನ ಹಂದರದ ಮೇಲೆ ಹೆಚ್ಚಿಗೆ ಭಾರ ಬೀಳುವುದರಿಂದ ಕೀಲುಗಳ ಸವೆತ ಹಾಗೂ ಬೆನ್ನು ನೋವು ಪರಿಹಾರ ಸಿಗದ ಇನ್ನೊಂದು ಸಮಸ್ಯೆ. ಅಷ್ಟೇ ಅಲ್ಲದೆ ಮಧುಮೇಹ, ರಕ್ತದೊತ್ತಡ, ಹೃದ್ರೋಗ, ಮೂಲವ್ಯಾಧಿ, ಪಿತ್ತಕೋಶದಲ್ಲಿ ಕಲ್ಲು ಇತ್ಯಾದಿ ತೊಂದರೆಗಳು ಇವರಿಗೆ ಕಟ್ಟಿಟ್ಟ ಬುತ್ತಿ. ನಮ್ಮ ದೇಶದ ಆರ್ಥಿಕ ಹಾಗೂ ಸಾಮಾಜಿಕ ಪರಿಸ್ಥಿತಿ ಸುಧಾರಿಸಿದ ಹಾಗೆ ಬೊಜ್ಜುತನದ ಸಮಸ್ಯೆ ಹೆಚ್ಚುತ್ತ ಬಂದಿದ್ದು ಈಗ ಮಕ್ಕಳಲ್ಲೂ ಕಾಣಸುತ್ತ ಇದೆ.

ಅಗತ್ಯಕ್ಕಿಂತ ಹೆಚ್ಚು ಕ್ಯಾಲೋರಿಗಳ ಸೇವನೆ, ವ್ಯಾಯಾಮರಹಿತ ಜೀವನ ಬೊಜ್ಜುತನಕೆಕ ಮುಖ್ಯ ಕಾರಣಗಳು. ಈ ಖಾಯಿಲೆ ಕೆಲವರಲ್ಲಿ ಅನುವಂಶೀಯವೂ ಹೌದು. ಮಾನಸಿಕ ಖಿನ್ನತೆ, ಹಾರ್ಮೋನುಗಳ ತೊಂದರೆ ಹಾಗೂ ಕೆಲವು ಔಷಧಿ ಮತ್ತು ಮಾದಕ ಪದಾರ್ಥಗಳ ಸೇವನೆಗಳೂ ಬೊಜ್ಜು ಬೆಳೆಯಲು ಕೆಲವರಲ್ಲಿ ಕಾರಣ.

ಬೊಜ್ಜು ಇಳಿಸುವುದು ಒಂದು ಲೆಕ್ಕಾಚಾರದ ಕೆಲಸವೇ ಸರಿ. ಸಾಧಾರಣ ಪರಿಶ್ರಮದ ಕೆಲಸ ಮಾಡುವ ವ್ಯಕ್ತಿಗೆ ಪ್ರತಿ ದಿನ 2400ರಿಂದ 2900 ಕಿಲೋ ಕ್ಯಾಲೋರಿಗಳಷ್ಟು ಶಕ್ತಿ ಬೇಕು. ಈ ಶಕ್ತಿಯನ್ನು ನಾವು ಸೇವಿಸುವ ಆಹಾರದ ಮೂಲಕ ಪಡೆಯುತ್ತೇವೆ. ಬೊಜ್ಜು ಇಳಿಸಲು ಬಯಸುವ ವ್ಯಕ್ತಿ ಮೊದಲು ತನ್ನ ದೇಹಕ್ಕೆ ಅಗತ್ಯವಿರುವ ಕ್ಯಾಲೋರಿಗಳೆಷ್ಟು? ಅದನ್ನು ಪಡೆಯಲು ಉಪಯೋಗಿಸಬಹುದಾದ ಆಹಾರ ಪದಾರ್ಥ (ತನ್ನ ಇಚ್ಛೆಯ ಆಹಾರ ಪದಾರ್ಥದೊಳಗೆ)ಗಳು ಯಾವುದು? ಅವುಗಳನ್ನು ಬಳಸುವ ಪ್ರಮಾಣ ಎಷ್ಟು? ಎಂದು ವೈದ್ಯರ ಅಥವಾ ಡಯಟಿಶಿಯನ್ನರ ಸಲಹೆ ಪಡೆದು ನಿರ್ಧರಿಸಬೇಕು. ಎಲ್ಲರಿಗೂ ಅನ್ವಯಿಸುವಂತೆ ಹೇಳುವುದಾದರೆ ಬೊಜ್ಜು ಇಳಿಸಲು ಬಯಸುವವರು ಪ್ರತಿ ಗ್ರಾಮ್‌ಗೆ ಅಧಿಕ ಕ್ಯಾಲೋರಿ ನೀಡುವ ಕೊಬ್ಬನ್ನು ಹೊಂದಿದ ಆಹಾರ ಪದಾರ್ಥಗಳಾದ ಮಾಂಸ, ಹಾಲು ಮತ್ತು ಹಾಲುಜನ್ಯ ಪದಾರ್ಥಗಳು, ಐಸ್‌ಕ್ರೀಂ, ಎಣ್ಣೆ ಹಾಗೂ ಎಣ್ಣೆಯಲ್ಲಿ ಕರಿದ ಪದಾರ್ಥಗಳು, ಪಿಜ್ಜಾ ಹಾಗೂ ಇತರ ಫಾಸ್ಟ್‌ಫುಡ್‌ಗಳು, ಸಿಹಿ ತಿಂಡಿಗಳು ಇತ್ಯಾದಿಗಳನ್ನು ತ್ಯಜಿಸಬೇಕು ಅಥವಾ ಕಡಿಮೆ ಪ್ರಮಾಣದಲ್ಲಿ ಉಪಯೋಗಿಸಬೇಕು. ಸೊಪ್ಪು ತರಕಾರಿಗಳನ್ನು ಹಾಗೂ ನೀರನ್ನು ಎಷ್ಟು ಬೇಕಾದರೂ ಸೇವಿಸಬಹುದು. ಮಾದಕ ದ್ರವ್ಯಗಳ ಸೇವನೆ ಕೂಡದು.

ತಾನು ಅಧಿಕ ಪ್ರಮಾಣದಲ್ಲಿ ಸೇವಿಸಿರುವ ಕ್ಯಾಲೋರಿಗಳನ್ನು ಖರ್ಚು ಮಾಡಲು ವ್ಯಾಯಾಮ ಅತ್ಯಗತ್ಯ. ಅದು ದೇಹದ ಅಂಗಗಳನ್ನು ಸದಾ ಸುಸ್ಥಿತಿಯಲ್ಲಿಡಲೂ, ರಕ್ತ ಪರಿಚಲನೆ ಎಲ್ಲ ಅಂಗಗಳಿಗೆ ಸರಾಗವಾಗಿ ಇರಲೂ ಸಹಾಯ ಮಾಡುತ್ತದೆ. ತಾನು ಈಗಾಗಲೆ ಹೊಂದಿರಬಹುದಾದ ಖಾಯಿಲೆಯನ್ನೂ ಹಾಗೂ ಇಳಿಸಬೇಕಾದ ತೂಕವನ್ನೂ ಗಣನೆಯಲ್ಲಿಟ್ಟುಕೊಂಡು ಸೂಕ್ತ ವ್ಯಾಯಾಮವನ್ನು ಆಯ್ಕೆ ಮಾಡಿಕೊಳ್ಳಬೇಕು.

ಅನುವಂಶೀಯತೆಯೂ ಸೇರಿದಂತೆ ಬೇರೆ ಯಾವುದೇ ದೈಹಿಕ ಅಥವಾ ಮಾನಸಿಕ ತೊಂದರೆಗಳಿಂದ ಬೊಜ್ಜುತನ ಬಂದಿದ್ದರೂ ಸೂಕ್ತ ಔಷಧಿಗಳು, ಆಹಾರ ಕ್ರಮ ಮತ್ತು ವ್ಯಾಯಾಮದ ಮುಖಾಂತರ ಬೊಜ್ಜನ್ನು ನಿಯಂತ್ರಣದಲ್ಲಿಡಬಹುದು.

ಶಸ್ತ್ರಚಿಕಿತ್ಸೆಯ ಮೂಲಕ ದೇಹದಲ್ಲಿ ಅಧಿಕ ಪ್ರಮಾಣದಲ್ಲಿ ಶೇಖರಿಸಿರುವ, ಮುಖ್ಯವಾಗಿ ಹೊಟ್ಟೆ, ತೊಡೆ, ನಿತಂಬಗಳಲ್ಲಿ ಹೆಚ್ಚಿಗೆಯಾಗಿರುವ ಕೊಬ್ಬನ್ನು ಕತ್ತರಿಸಿ ತೆಗೆಯುವ ವಿಧಾನ ಹಾಗೂ ಜಠರದ ಗಾತ್ರವನ್ನು ಚಿಕ್ಕದು ಮಾಡಿ ಆ ಮೂಲಕ ತಿನ್ನಬಹುದಾದ ಆಹಾರವನ್ನು ಕಡಿಮೆ ಮಾಡಿ ಬೊಜ್ಜನ್ನು ನಿಯಂತ್ರಿಸುವ ಇನ್ನೊಂದು ವಿಧಾನದ ಶಸ್ತ್ರಚಿಕಿತ್ಸೆಗಳೂ ಚಾಲ್ತಿಯಲ್ಲಿವೆ.

Prevention is better than cure ಎಂಬ ವಾಕ್ಯವು ಬೊಜ್ಜುತನಕ್ಕೂ ಅನ್ವಯಿಸುತ್ತದೆ. ಆರೋಗ್ಯವಂತ ದೇಹವುಳ್ಳವರೂ ಬೊಜ್ಜು ಬಾರದಂತೆ ಕಾಳಜಿ ವಹಿಸಬೇಕು.

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 98451 36322**

## ಶ್ರೀ ಶಂಕರ ಭಾರತೀ ಪಾಠಶಾಲೆ, ಗುರುಕುಲ, ಅಜ್ಜಾವರ

**ಸುಳ್ಯ ತಾಲೂಕು - 574 246, ದ.ಕ.**

**(ಶ್ರೀ ಶಾರದಾರಾಮ ಸೇವಾ ಪ್ರತಿಷ್ಠಾನ, ಬಯಂಬು, ಅಜ್ಜಾವರ-ಇದರ ಅಂಗಸಂಸ್ಥೆ)**

ಪರಮಪೂಜ್ಯ ಜಗದ್ಗುರುಗಳಾದ ಶೃಂಗೇರಿಯ ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳವರ ದಿವ್ಯಹಸ್ತದಿಂದ ದಿನಾಂಕ 08-05-1996ರಂದು ಉದ್ಘಾಟಿಸಿ,ಅನುಗ್ರಹಿಸಲ್ಪಟ್ಟಂತಹ ಶ್ರೀ ಶಂಕರ ಭಾರತೀ ಪಾಠಶಾಲೆಗೆ 2010-2011ನೇ ಸಾಲಿನ ಋಗ್ವೇದ ವಿದ್ಯಾರ್ಥಿಗಳಿಗಾಗಿ ಆಸಕ್ತ ಉಪನೀತ ವಟುಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಆಸಕ್ತರು ಕೂಡಲೇ ಅರ್ಜಿಗಾಗಿ ಪಾಠಶಾಲೆಯನ್ನು ಸಂಪರ್ಕಿಸಬೇಕಾಗಿ ಕೋರಲಾಗಿದೆ. ಪ್ರವೇಶಾತಿ ವಿಷಯದಲ್ಲಿ ಪಾಠಶಾಲೆಯ ಮುಖ್ಯಸ್ಥರ ತೀರ್ಮಾನವೇ ಅಂತಿಮ.

**ಅಧ್ಯಯನದ ವಿಷಯ : ಸಂಸ್ಕೃತದ ಪ್ರಾಥಮಿಕ ಜ್ಞಾನದೊಂದಿಗೆ ಋಗ್ವೇದದ ಸಂಪೂರ್ಣಾಧ್ಯಯನ ಹಾಗೂ ಪೂರ್ವಾಽಪರ ಪ್ರಯೋಗ.**

ವೈದಿಕ ಧರ್ಮ, ಸಂಸ್ಕೃತಿಗಳ ಪ್ರಚಾರ ಹಾಗೂ ಪ್ರಸಾರಕ್ಕೋಸ್ಕರ ಪ್ರಾರಂಭವಾದ ಈ ಪಾಠಶಾಲೆಯಲ್ಲಿನ ಅವಕಾಶವನ್ನು ಆಸಕ್ತ ವಟುಗಳು ಸದುಪಯೋಗ ಪಡಿಸಿಕೊಳ್ಳಬೇಕಾಗಿ ವಿನಂತಿ.

| | | |
|---|---|---|
| **ಎ. ಶಿವರಾವ್** | **ಎ. ಭಾಸ್ಕರ ರಾವ್** | **ವೆ| ಶ್ರೀ ಕೆ. ನಿರಂಜನ ಭಟ್** |
| ಬೆಂಗಳೂರು | ಬಯಂಬು | ಅಧ್ಯಾಪಕರು |
| ಧರ್ಮದರ್ಶಿಗಳು | ಧರ್ಮದರ್ಶಿಗಳು | ಮೊಬೈಲ್ : 9448120212 |
| ಮೊಬೈಲ್ : 9880570747 | ಮೊಬೈಲ್ : 9448120309 | |

## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

**ಈ ತಿಂಗಳ ಕಾರ್ಯಕ್ರಮಗಳು**

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 8-00 ಗಂಟೆಗೆ

ಪ್ರತಿ ಬುಧವಾರ : **''ಸೌಂದರ್ಯಲಹರಿ ಪಾರಾಯಣ''** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ **''ಪಾರಾಯಣ''** ಸಂಜೆ ಗಂಟೆ 4-00ರಿಂದ

**ಸಂಕಷ್ಟಹರ ಚತುರ್ಥಿಯಂದು (ತಾ.30-06-2010) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

2ನೇ ಶನಿವಾರ : **ತಾ.10-07-2010 ''ಗಮಕವಾಚನ'' ಸಂಜೆ ಗಂಟೆ 5-00ರಿಂದ (ಶ್ರೀ ನೀಲಾವರ ಲಕ್ಷ್ಮೀನಾರಾಯಣ ರಾವ್ ಹಾಗೂ ಶ್ರೀ ಬಾರ್ಕೂರು ನಾಗೇಶ ರಾವ್‌ರವರಿಂದ)**

**ಶುದ್ಧ ಪಂಚಮಿಯಂದು (ತಾ.16-06-2010) ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ವಧೂ-ವರರ ವೇದಿಕೆ

**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ.**

ಸಮಾಜದ ವಿವಾಹ ಯೋಗ್ಯ ವಧು-ವರರ ನೋಂದಣಿ, ವಿವಿಧ ಮಾಹಿತಿ ಮೊದಲಾದವುಗಳನ್ನು ಆಸಕ್ತ ಹೆತ್ತವರು ಪಡೆದುಕೊಂಡು ಪರಸ್ಪರ ವಿಚಾರ ವಿನಿಮಯ ಮಾಡಲು ಅವಕಾಶವಿದೆ. ಸಮಾಜ ಬಾಂಧವರು ವೇದಿಕೆಯ ಸದುಪಯೋಗ ಪಡೆದುಕೊಳ್ಳಬೇಕಾಗಿ ವಿನಂತಿ.

**- ಅಧ್ಯಕ್ಷರು, ಮಹಿಳಾ ವೇದಿಕೆ, ಶ್ರೀಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ-2**

## ವೈದ್ಯಕೀಯ ನೆರವು ವೇದಿಕೆ

**ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾ ನಗರ, ಕುಂಜಿಬೆಟ್ಟು , ಉಡುಪಿ**

ನೆರವಿನ ಅಗತ್ಯವುಳ್ಳ ನಮ್ಮ ಸಮಾಜ ಬಾಂಧವರು ಅರ್ಜಿ ಕಳುಹಿಸಬೇಕಾದ ವಿಳಾಸ: ಕಾರ್ಯದರ್ಶಿ, ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಶ್ರೀಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ-576102.

ವೈದ್ಯಕೀಯ ನೆರವು ವೇದಿಕೆಯ ಮಹದುದ್ದೇಶದ ಯೋಜನೆಯನ್ನು ಯಶಸ್ವಿಯಾಗಿಯೂ, ನಿರಂತರವಾಗಿಯೂ ನಡೆಸುವಂತಾಗಲು ಸಮಾಜ ಬಾಂಧವರು ದೇಣಿಗೆಗಳನ್ನು ''ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಕುಂಜಿಬೆಟ್ಟು ಉಳಿತಾಯ ಖಾತೆ ನಂ.220/2928 ಸಿಂಡಿಕೇಟ್ ಬ್ಯಾಂಕ್, ರಥಬೀದಿ ಬ್ರಾಂಚ್'' ಈ ಹೆಸರಿನಲ್ಲಿ ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಕಾರ್ಯದರ್ಶಿ, ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಶ್ರೀಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ-576 102 : ಈ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ.

**- ಅಧ್ಯಕ್ಷರು ಮತ್ತು ಸಂಚಾಲಕರು, ವೈದ್ಯಕೀಯ ನೆರವು ವೇದಿಕೆ**

## ಬ್ರಹ್ಮೋಪದೇಶ ದಿನಾಂಕ ಮುಂದೂಡಿಕೆ (ಬಾಂಧವರ ಗಮನಕ್ಕೆ)

**ಚಿ| ಸನತ್**

ಶ್ರೀಮತಿ ಪ್ರತಿಮಾ ಮತ್ತು ಶ್ರೀ ಮುರಳೀಧರ ರವರ ಪುತ್ರ ಚಿ| ಸನತ್‌ನಿಗೆ 19-5-2010ರಂದು ನಡೆಯಬೇಕಿದ್ದ ಬ್ರಹ್ಮೋಪದೇಶವು ಅನಿವಾರ್ಯ ಕಾರಣಗಳಿಂದಾಗಿ ಮುಂದೂಡಿ ತಾ.24-6-2010ರ ಗುರುವಾರ , ಗೌರಿಶಂಕರ ಕೃಪಾ, ಧರ್ಮಸ್ಥಳ ಇಲ್ಲಿ ಬೆಳಿಗ್ಗೆ ಗಂಟೆ 10-01ಕ್ಕೆ ನೆರವೇರಿಸಲು ನಿಶ್ಚಯಿಸಿರುತ್ತಾರೆ. ಬಂಧುಮಿತ್ರರು ಇದನ್ನೆ ಆಮಂತ್ರಣವೆಂದು ತಿಳಿಯಬೇಕಾಗಿ ವಿನಂತಿ.

**- ಶ್ರೀಮತಿ ಪ್ರತಿಮಾ ಮತ್ತು ಶ್ರೀ ಮುರಳೀಧರ, ಕುಕ್ಕೆಹಳ್ಳಿ**

**ಚಿ| ಸುದೀಪ್**

ಶ್ರೀಮತಿ ವಿದ್ಯಾ ಮತ್ತು ಶ್ರೀ ರವಿಶಂಕರ್‌ರವರ ಪುತ್ರ ಚಿ| ಸುದೀಪ್‌ನಿಗೆ 23-5-2010ರಂದು ನಡೆಯಬೇಕಿದ್ದ ಬ್ರಹ್ಮೋಪದೇಶವು ಅನಿವಾರ್ಯ ಕಾರಣಗಳಿಂದಾಗಿ ಮುಂದೂಡಿ ತಾ.20-6-2010, ರವಿವಾರ ಕುಂಜಿಬೆಟ್ಟು ಶ್ರೀ ಶಾರದಾ ಕಲ್ಯಾಣ ಮಂಟಪದ ಜ್ಞಾನಮಂದಿರದಲ್ಲಿ ಬೆಳಿಗ್ಗೆ ಗಂಟೆ 8-30ಕ್ಕೆ ನೆರವೇರಿಸಲು ನಿಶ್ಚಯಿಸಿರುತ್ತಾರೆ. ಬಂಧುಮಿತ್ರರು ಇದನ್ನೆ ಆಮಂತ್ರಣವೆಂದು ತಿಳಿಯಬೇಕಾಗಿ ವಿನಂತಿ.



**- ಶ್ರೀಮತಿ ವಿದ್ಯಾ ಮತ್ತು ಶ್ರೀ ರವಿಶಂಕರ್, ಕುಕ್ಕೆಹಳ್ಳಿ**


## ರಾಮಾ ಅಟೋಮೊಬೈಲ್ಸ್

**ಮಾರುತಿ ವಾಹನ ತಜ್ಞರು**

ಮಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006.

**ಫೋನ್ : 2454355, ಮೊಬೈಲ್ : 94485 45702**


ಪ್ರೊ : ಯು. ಸಂತೋಷ ಕುಮಾರ್, ಉಜ್ಜೋಡಿ


*ನಮ್ಮಲ್ಲಿ ಹೋಮ, ಹವನ ಇತ್ಯಾದಿ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ನಡೆಸಿಕೊಡಲಾಗುವುದು ಹಾಗೂ (ಹೊರಗಿನ) ಮದುವೆ, ಉಪನಯನ ಇತ್ಯಾದಿ ವಿಶೇಷ ಸಮಾರಂಭಗಳಿಗೆ ಕ್ಯಾಟರಿಂಗ್ ವ್ಯವಸ್ಥೆಯನ್ನು ಮಾಡಲಾಗುವುದು.*

**ಸಂಪರ್ಕಿಸಿರಿ :**

**ಕೆ. ರಾಮಮೂರ್ತಿ ಭಟ್,** ಪುರೋಹಿತರು

ಶಾರದಾ ಕೃಪಾ, ಆತ್ರಾಡಿ, ಉಡುಪಿ ತಾಲೂಕು. ಮೊಬೈಲ್ : **9448108010**

## Buying and selling shares as easy as checking your emails

**Sharekhan Online Trading Account Features:**

- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

**Contact : Pradeep Rao K.**
**Tel : 0824 2412903, 9448191028**
**Navadurga Share Services**
**Email : navdurga@bp.sharekhan.com**

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL-IN-DP-CDSL-271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132: (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013 Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INB010606122;NSE: INS23106924)

## Rao's 'ಮಾತೃಛಾಯಾ'ರವರ

ಉಡುಪಿ ವಿಶಿಷ್ಟ ರುಚಿಯುಳ್ಳ

ಸಾರಿನ ಹಾಗೂ ಸಾಂಬಾರ್ ಮಸಾಲೆ, ಅಪ್ಪೆಮಿಡಿ ಹಾಗೂ ಮಿಡಿ ಉಪ್ಪಿನಕಾಯಿ ಹಪ್ಪಳ ಹಾಗೂ ಸೆಂಡಿಗೆಗಳು, ಶುದ್ಧ ದನದ ತುಪ್ಪ ಹಾಗೂ ಜೇನು ತುಪ್ಪ

**-: ಮೊದಲಾದ ನಿತ್ಯೋಪಯೋಗಿ ವಸ್ತುಗಳಿಗೆ ಸಂದರ್ಶಿಸಿರಿ :-**

**ಭಾರತ್ ಸ್ಟೋರ್ಸ್**

**ರಥಬೀದಿ, ಉಡುಪಿ - 576 101. ಫೋನ್ : 2522444**


Owned & Published by : B. Krishnamoorthy Rao, Ambalpady - Secretary Sthanika Dravida Brahmana Sangha (R.), Shri Sharada Mantapa, Kunjibettu, Udupi - 576 102. Ph : 0820-2520754
Edited by Y. Mohan Rao, Designed @ SriNidhi Computer Graphics, Bailur, Udupi, Printed at Agrahara Offsets, Udupi - 576 101. E-mail : srisharadaudupi@yahoo.co.in Website : www.srisharada.org